

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 Issue : 253 Thursday 19-06-2025 E-mail : maruti.b.hosamani76@gmail.com Page: 4 Price : Rs. 1/-


## ಮೀಸಲು ಕ್ಷೇತ್ರದಲ್ಲಿ ಮಾಚನೂರು ಗ್ರಾಮದ ದಲಿತರಿಗಿಲ್ಲಾ ಸ್ಮಶಾನದ ಭಾಗ್ಯ



**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಅಂಬೇಡ್ಕರ್ ಬರೆದ ಸಂವಿಧಾನದ ಆಶಯದಂತೆ ದಲಿತರಿಗೆ ಸೌಲಭ್ಯ ಸಿಗುತ್ತದೆ ಎಂದು ಸರಕಾರ ಹೇಳುತ್ತೇ. ಆದರೆ ಮಾನ್ವಿ ವಿಧಾನ ಸಭಾ ಕ್ಷೇತ್ರವು ಮೀಸಲು ಕ್ಷೇತ್ರವಾದರು ಸಹ ಸಿರವಾರ ತಾಲೂಕಿನ ಮಾಚನೂರು ಗ್ರಾಮದಲ್ಲಿ ದಲಿತರು ಸತ್ತ-ರೆ, ಜೀವ ಭಯದ ನಡುವೆ ರಭಸವಾಗಿ ಹರಿಯುವ ಹಳ್ಳ ದಾಟಿ ಅಂತ್ಯ ಸಂಸ್ಕಾರ ಮಾಡಬೇಕಾದ ದುಸ್ಥಿತಿ ಇದೆ.

ರಾಯಚೂರು ಜಿಲ್ಲೆಯ ಮಾನ್ವಿ ವಿಧಾನ ಸಭಾ ಕ್ಷೇತ್ರದ ಶಾಸಕ ಹಂಪಯ್ಯ ನಾಯಕರೆ ತಾವೂ ದಲಿತರಾಗಿ ಮಾಚನೂರು ಗ್ರಾಮದ ದಲಿತರು ಸ್ಮಶಾನದ ಭಾಗ್ಯ ಇಲ್ಲದೆ ನರಳಾಡುತ್ತ ತುಂಬಿದ ಹಳ್ಳದಲ್ಲಿ ಸತ್ತ ಹೆಣ ಹೊತ್ತು ಕೊಂಡು ಸಾಗಿ ಜೀವಂತ ಇರುವವರು ಸತ್ತ-ರೆ ಇದಕ್ಕೆ ಯಾರು ಹೊಣೆ ಎಂದು ಸಾರ್ವಜನಿಕರ ಪ್ರಶ್ನೆಯಾಗಿದೆ.

ದೇಶಕ್ಕೆ 1947 ರಲ್ಲಿ ಸ್ವಾತಂತ್ರ್ಯ ಬಂದಿದೆ ಹೊರತು, ಅಂಬೇಡ್ಕರ್ ಬರೆದ ಸಂವಿಧಾನದ ಆಶಯಗಳು ಸಿರವಾರ ತಾಲೂಕಿನ ಮಾಚನೂರು ಗ್ರಾಮದ ದಲಿತರಿಗೆ ಸ್ವಾತಂತ್ರ್ಯ ಲಭಿಸಿಲ್ಲ ವಾಗಿದ್ದರಿಂದ ಒಂದು ರೀತಿಯಲ್ಲಿ ಅಂಬೇಡ್ಕರ್ ಆಶಯಗಳು ಮಾಚನೂರು ಗ್ರಾಮಕ್ಕೆ ಇಲ್ಲವಾಗಿದೆ ಎಂದು ಗ್ರಾಮಸ್ಥರ ನೋವಿನ ಕೂಗಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಗ್ರಾ.ಪಂ ಕಛೇರಿಯಲ್ಲಿ ಉಪಾಧ್ಯಕ್ಷ ಸೌಮ್ಯ ದರ್ಪ – ಚಪ್ಪಲು ಹಾಕಿ ಕಛೇರಿ ಒಳಗೆ ಹೋಗಿದ್ದ ಪತ್ರಕರ್ತೆಗೆ ಹಲ್ಲೆಗೆ ಯತ್ನ..!


**ಸಿಹಿ ಕಹಿ ಸುದ್ದಿ,**

**ಕೋಣಿ :** ಗ್ರಾಮ ಪಂಚಾಯತ್ ಕಛೇರಿ ಒಳಗೆ ಚಪ್ಪಲು ಧರಿಸಿ ಹೋಗಿದ್ದ ಪತ್ರಕರ್ತೆಗೆ ಪಂಚಾಯತ್ ಉಪಾಧ್ಯಕ್ಷಹಾಗೂಸದಸ್ಯರುಸೇರಿಹಲ್ಲೆಗೆಮುಂದಾದ ಘಟನೆ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕೋಣಿ ಗ್ರಾಮ ಪಂಚಾಯತ್ ನಲ್ಲಿ ಮಂಗಳವಾರ ಬೆಳಿಗ್ಗೆ ನಡೆದಿದೆ.

ಪತ್ರಕರ್ತೆಯೋರ್ವರು ಎಸ್ಸಿ/ಎಸ್ಟಿ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕಾರ್ಯಕ್ರಮದಬಗ್ಗೆಪಂಚಾಯತ್ ಅಭಿವೃದ್ಧಿ ಅಧಿಕಾರಿಯೊಂದಿಗೆ ಮಾತನಾಡಲು ಹೋಗಿದ್ದ ಸಂದರ್ಭದಲ್ಲಿ ಅಲ್ಲಿದ್ದ ಕಾಂಗ್ರೆಸ್ ಜನ ಪ್ರತಿನಿಧಿಗಳು ಕ್ಷುಲ್ಲಕ ಕಾರಣಕ್ಕೆ ಚಪ್ಪಲು ಹಾಕಿ ಒಳಗೆ ಬಂದಿದ್ದೀರಿ ಅಂತಾ ತಗಾದೆ ತೆಗೆದು ಜಗಳ ಪ್ರಾರಂಭಿಸಿದರು. ಅದಕ್ಕೆ ಪತ್ರಕರ್ತೆ ಒಳಗಡೆ ಅಧಿಕಾರಿಗಳು ಚಪ್ಪಲಿ ಧರಿಸಿದನ್ನು ಪ್ರಶ್ನಿಸಿದರು.

ಅಧಿಕಾರಿಗಳು ಕಚೇರಿ ಒಳಗೆ ಚಪ್ಪಲು ಧರಿಸಬಹುದು ಆದರೆ ಸಾರ್ವಜನಿಕರಿಗೆ ಕಚೇರಿ ಒಳಗೆ ಚಪ್ಪಲು ಧರಿಸಲು ನಿರ್ಬಂಧಿಸಲಾಗಿದೆ ಎಂದು ಗ್ರಾಮ ಪಂಚಾಯತ್, ಉಪಾಧ್ಯಕ್ಷೆ ಸೌಮ್ಯ ದರ್ಪ ಮೆರೆದರು. ನಂತರ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ದಿವಾಕರ್ ಶೆಟ್ಟಿ ಎಂಬಾತನುಪಂಚಾಯತ್ಒಳಗಡೆಬೊಬ್ಬೆಹಾಕಿಗಟ್ಟಿಯಾಗಿ ಕಚೇರಿಯ ಒಳಗಡೆ ಮನಬಂದಂತೆ ಮಾನಸಿಕ ಸ್ಥಿಮಿತ ಕಳೆದು ಕೊಂಡವರ ಹಾಗೆ ಎಲ್ಲಾರು ಭಯ ಬೀಳುವ ಹಾಗೆ ಕೂಗಾಡಿ ಕೊಂಡು ಕಛೇರಿಯ ಸಿಬ್ಬಂದಿಗಳಿಗೂ ಹಾಗೂ ಬರುವ ಸಾರ್ವಜನಿಕರಿಗೆ ಕೆಲಸ ಮಾಡಿಕೊಳ್ಳಲು ತೊಂದ-ರೆ ಮಾಡುವ ಹಾಗೆ ನಡೆದುಕೊಂಡಿದ್ದು ಅಲ್ಲದೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಅಶೋಕ್ ಬಂಡಾರಿ ಈತ ಪತ್ರಕರ್ತರನ್ನು ತಡೆದು ಕೈಯಿಂದ ತಳ್ಳಿರುತ್ತಾನೆ.

ನಂತರಪತ್ರಕರ್ತೆಅಭಿವೃದ್ಧಿಅಧಿಕಾರಿಅವರನ್ನುಭೇಟಿಯಾಗಿ ಚೇಂಬರ್ ನಲ್ಲಿ ಕುಳಿತು ಕೊಂಡಿರುವಾಗ ಕಾಂಟ್ರಾಕ್ಟ್ರ ಗುಣಾಕರ್ ಶೆಟ್ಟಿ ಎಂಬಾತನು ಏಕಾಏಕಿಯಾಗಿ ಚೇಂಬರ್ ಒಳಗೆ ನುಗ್ಗಿ ನಾನು ಎಂಎಲ್ಎ ಕಿರಣ್ ಕೊಡ್ಗಿ ಅವರಿಗೆ




ಮಾತನಾಡುತ್ತೇನೆ ಹಾಗೆ ಮಾಡುತ್ತೇನೆ ಹೀಗೆ ಮಾಡುತ್ತೇನೆ ಎಂದು ದರ್ಪ ಮೆರೆದಿರುತ್ತಾನೆ ಈ ದರ್ಪ ಮೆರೆಯುವ ಗುಣಕರ್ ಶೆಟ್ಟಿ ಮಾಡೋದೆಲ್ಲ ಕಳಪೆ ಕಾಮಗಾರಿ ಅಕ್ರಮ ಮರಳು ಸಾಗಾಟ ಮಾಡುದೇ ಈತನ ಕಾಯಕ ಮಳೆಗಾಲ ಮುಗಿದರೆ ಅಕ್ರಮ ಗಣಿಗಾರಿಕೆ ಮಾಡುವ ಗುಣಕರನಿಗೆ ಭಾಗಾಕಾರದ ಲೆಕ್ಕ ಸಿಗಬಹುದು ಎಂದು ಸಾರ್ವಜನಿಕರು ತಿಳಿಸಿದ್ದಾರೆ. ಆದರೆ ಪತ್ರಕರ್ತೆ ಅವರ ಯಾವ ವಿಚಾರಕ್ಕೂ ತಲೆ ಕೆಡಿಸಿಕೊಳ್ಳದೆ ಅಭಿವೃದ್ಧಿ ಅಧಿಕಾರಿಯವರ ಜೊತೆ ಮಾತನಾಡಿ ಬಂದಿರುತ್ತಾರೆ. ಕ್ಷುಲ್ಲಕ ಕಾರಣಕ್ಕೆ ಕೆಲವು ಹೊತ್ತು ಗೊಂದಲ ಉಂಟಾಗಿಯಿತು. ಕೋಣಿ ಗ್ರಾಮ ಪಂಚಾಯಿತಿನಲ್ಲಿ ಕಾಂಗ್ರೆಸ್ ಜನ ಪ್ರತಿನಿಧಿಗಳು ದಿನ ಬೆಳಗಾದರೆ ಪಂಚಾಯಿತಿನಲ್ಲೇ ಕಾಲ ಕಳೆದು ಬರುವ ಸಾರ್ವಜನಿಕರಿಗೆ ತೊಂದರೆ ಮಾಡುವುದು ಇವರ ಕೆಲಸ ಅಲ್ಲದೆ ಪಂಚಾಯಿತಿನಲ್ಲಿ ಚಪ್ಪಲಿ ಕಾಯುವುದೇ ಇವರ ಕೆಲಸ ಎಂದು ಸಾರ್ವಜನಿಕರು ತಿಳಿಸಿದ್ದಾರೆ.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಯಾದ ಸೌಮ್ಯ ಮತ್ತು ಅಶೋಕ್ ಭಂಡಾರಿ ಗ್ರಾಮ ಪಂಚಾಯಿತಿಯಲ್ಲಿ ಇವರಿಬ್ಬರದ್ದೇ ಕಾರ್ಬಾರ್..! ಮೋಜು ಮಸ್ತಿ..! ಮಾಡಿಕೊಂಡು ದಿನ ಬೆಳಗಾದರೆ ಪಂಚಾಯತ್ ನಲ್ಲಿ ಸಾರ್ವಜನಿಕರಿಗೆ ತೊಂದರೆ ಮಾಡುವುದರ ಜೊತೆಗೆ ಸಾರ್ವಜನಿಕರ ಕೆಲಸ ಮಾಡುವ ಸಿಬ್ಬಂದಿಗಳಿಗೂ ಕೂಡ ತೊಂದರೆಯಾಗಿದೆ ಇದನ್ನು ಹೇಳಿ ಕೊಳ್ಳಲಾಗದೆ ಆ ಕಿರಿಕಿರಿಯನ್ನು ಅನುಭವಿಸಿ ಕೊಂಡು ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿದ್ದಾರೆ ಎನ್ನುವ ಮಾಹಿತಿಗಳು ಕೇಳಿ ಬಂದಿದೆ. ಈ ರೀತಿ ಮೋಜು..! ಮಸ್ತಿ...! ಗಮನ ಇವರು ತಮ್ಮ ತಮ್ಮ ಸ್ವಂತ ಮನೆಗಳಲ್ಲಿ ಅಥವಾ ತಮ್ಮ ತಮ್ಮ ಸ್ವಂತ ಕಛೇರಿಗಳಲ್ಲಿ ಇಟ್ಟು ಕೊಳ್ಳಬಾರದು ಆದರೆ ಇವರು ಸಾರ್ವಜನಿಕ ಕಛೇರಿಯಾದ ಗ್ರಾಮ ಪಂಚಾಯಿತಿಯಲ್ಲಿ ಈ ರೀತಿ ನಡೆದು ಕೊಂಡು ಕಛೇರಿಗೆ ಬರುವ ಸಾರ್ವಜನಿಕರಿಗೆ ತೊಂದರೆ ಯಾಗುತ್ತಿದೆ ಎಂದು ಸಾರ್ವಜನಿಕರು ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಈ ರೀತಿಯಾಗಿ ವರ್ತಿಸುತ್ತಿರುವ ಜನ ಪ್ರತಿನಿಧಿಗಳು ಜನ ಸಾಮಾನ್ಯರೊಂದಿಗೆ ಯಾವ ರೀತಿ ವರ್ತಿಸಬಹುದೆಂಬ ಅನುಮಾನ ಮೂಡಿದೆ. ಪತ್ರಕರ್ತರು ಈ ವಿಚಾರ ಮುಖ್ಯ ಕಾರ್ಯನಿರ್ವಾಣಾಧಿಕಾರಿ ಉಡುಪಿ ಇವರ ಗಮನಕ್ಕೆ ತಂದಿದ್ದು ಯಾವುದೇ ಸ್ಪಂದನೆ ಇಲ್ಲದೆ ನನಗೆ ಯಾವುದೇ ಸಂಬಂಧ ಇಲ್ಲ ಎನ್ನುವ ರೀತಿ ನಡೆದು ಕೊಂಡಿರುವುದಂತೂ ಭಾರಿ ಬೇಸರ ವ್ಯಕ್ತವಾಗಿದೆ. ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಕಾಮಗಾರಿ ಆಗದೆ ಬಿಲ್ ಆಗಿರುವ ಹಗರಣಗಳು, ಕಳಪೆ ಕಾಮಗಾರಿಗಳು ಕುಡಿಯುವ ನೀರಿನ ಸಮಸ್ಯೆ ಹೀಗೆ ಹತ್ತು ಹಲವು ಸಮಸ್ಯೆಗಳಿದ್ದು ಕಾರ್ಯ ನಿವಾಹಣಧಿಕಾರಿ ಜಿಲ್ಲೆಯ ಗ್ರಾಮ ಪಂಚಾಯತ್ ಗೆ ಭೇಟಿ ಕೊಡದೆ ಸಮಸ್ಯೆಗಳನ್ನು ಆಲಿಸದೆ ಬೆಚ್ಚಗೆ ಒಳಗೆ ಕುಳಿತು ಕೊಳ್ಳುತ್ತಿರುವುದು ಸಾರ್ವಜನಿಕ ವಲಯದಲ್ಲಿ ತುಂಬಾ ಬೇಸರ ಮೂಡಿಸಿದ್ದು ಇಂತಹ ಅಧಿಕಾರಿಗಳನ್ನು ರಾಜ್ಯ ಸರಕಾರ ಕೂಡಲೇ ಅಮಾನತ್ ಮಾಡಬೇಕು ಅಥವಾ ವರ್ಗಾವಣೆ ಮಾಡಬೇಕು ಎಂದು ಸಾರ್ವಜನಿಕರು ತಿಳಿಸಿದ್ದಾರೆ. ಅಲ್ಲದೆ ಪಂಚಾಯತ್ ಜನ ಪ್ರತಿನಿಧಿಗಳು ಪತ್ರಕರ್ತೆಯ ಮೇಲೆ ಹಲ್ಲೆಗೆ ಯತ್ನಿಸಿದ ಬಗ್ಗೆ ಕುಂದಾಪುರ ಪೋಲಿಸ್ ಠಾಣೆಯಲ್ಲಿ ದೂರು ನೀಡಿದ್ದಾರೆ,

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ. ಹಚ್ಯಾಳ.ದೇವರ ಹಿಪ್ಪರಗಿ**

## ಶ್ರೀರಾಮಕೃಷ್ಣರಿಗೆ ಕಾಳಿದರ್ಶನದ ಘಟನೆ ಸಾಧಕರಿಗೆ ದಾರಿದೀಪ – ಶ್ರೀಶಾರದಾಶ್ರಮದ ಸದ್ಭಕ್ತೆ ಶ್ರೀಮತಿ ಹೆಚ್ ಲಕ್ಷ್ಮೀದೇವಮ್ಮ ಅಭಿಮತ

**ಸಿಹಿ ಕಹಿ ಸುದ್ದಿ,**

**ಚಳ್ಳಕೆರೆ :** ಶ್ರೀರಾಮಕೃಷ್ಣರಿಗೆ ಭವತಾರಿಣಿ ಕಾಳಿಮಾತೆಯು ದರ್ಶನ ನೀಡಿದ ಘಟನೆ ಆಧ್ಯಾತ್ಮಿಕ ಸಾಧಕರಿಗೆ ದಾರಿ ದೀಪವಾಗಿದೆ ಎಂದು ಚಳ್ಳಕೆರೆಯ ಶ್ರೀಶಾರದಾಶ್ರಮದ ಸದ್ಭಕ್ತರು ಹಾಗೂ ನಿವೃತ್ತ ಶಿಕ್ಷಕಿ ಶ್ರೀಮತಿ ಹೆಚ್ ಲಕ್ಷ್ಮೀದೇವಮ್ಮ ತಿಳಿಸಿದರು. ತ್ಯಾಗರಾಜ ನಗರದ ಸದ್ಭಕ್ತರಾದ ಶ್ರೀಮತಿ ನಂಜಮ್ಮ ಕೆಂಚಪ್ಪ ಶಿಕ್ಷಕರ ಸವಿತಾ ನಿವಾಸದಲ್ಲಿ ಶ್ರೀಶಾರದಾದೇವಿ ಸತ್ಸಂಗ ಕೇಂದ್ರದ ವತಿಯಿಂದ ಆಯೋಜಿಸಿದ್ದ ವಿಶೇಷ ಸತ್ಸಂಗ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಜಗತ್ತಿನ ಜನರು ಲೌಕಿಕ ಜೀವನದ ಸುಖ-ಕ್ಕಾಗಿ ಹಾತೊರೆದರೆ ಭಗವಾನ್ ಶ್ರೀರಾಮಕೃಷ್ಣರು ಕಾಳಿಮಾತೆಯ ದರ್ಶನಕ್ಕಾಗಿ ನಿರಂತರವಾಗಿ ವ್ಯಾಕುಲತೆ ಯಿಂದ ಪ್ರಾರ್ಥಿಸುತ್ತಿದ್ದರು. ವ್ಯಾಕುಲತೆಯ ಮೊರೆಗೆ ಅವರಿಗೆ ಕಾಳಿಯ ಭವ್ಯ



ದರುಶನಭಾಗ್ಯಲಭಿಸುತ್ತದೆ. ಆದ್ದ-ರಿಂದ ನಾವು ಸಹ ಭಗವಂತನನ್ನು ಪರಮ ವ್ಯಾಕುಲತೆಯಿಂದ ಪ್ರಾರ್ಥಿಸಿ ಅವನ ದರುಶನವನ್ನು ಪಡೆಯಬಹುದು ಎಂದರು. ಈ ಸತ್ಸಂಗದ ಪ್ರಯುಕ್ತ ಶ್ರೀಶಾರದಾಶ್ರಮದ ಸದ್ಭಕ್ತರಿಂದ ಸಾಮೂಹಿಕ ಶ್ರೀರಾಮರಕ್ಷಾ ಸ್ತೋತ್ರ, ಹನುಮಾನ್ ಚಾಲೀಸ್ ಪಠಣ, ವಿಶೇಷ ಭಜನೆ ಹಾಗೂ "ಶ್ರೀಶಾರದಾದೇವಿ ಜೀವನಗಂಗಾ" ಗ್ರಂಥ ಪಾರಾಯಣ ಕಾರ್ಯಕ್ರಮವನ್ನು ಯತೀಶ್.ಎಂ ಸಿದ್ದಾಪುರ ನಡೆಸಿ ಕೊಟ್ಟರು.


ಸತ್ಸಂಗ ಕಾರ್ಯಕ್ರಮದಲ್ಲಿ ಸದ್ಭಕ್ತರಾದ ಶ್ರೀಮತಿ ನಂಜಮ್ಮ ಕೆಂಚಪ್ಪ, ಅನುಸೂಯ ರಾಘವೇಂದ್ರ, ಪ್ರಮೀಳಾ ಜಗದೀಶ್, ಗೀತಾ ಸುಂದರೇಶ್ ದೀಕ್ಷಿತ್,ಪಂಕಜ ಚೆನ್ನಪ್ಪ, ಸರ್ವಮಂಗಳ ಶಿವಣ್ಣ, ಲಕ್ಷ್ಮೀದೇವಮ್ಮ, ಚಂದ್ರಕಲಾ, ರಾಧಾ, ಭಾರ್ಗವಿ, ಶಿಲ್ಪ ಉಪಸ್ಥಿತರಿದ್ದರು.

**ವರದಿ-ಯತೀಶ್.ಎಂ ಸಿದ್ದಾಪುರ, ಚಳ್ಳಕೆರೆ.**

## ಪದವಿ ಕಾಲೇಜಿನಲ್ಲಿ ನಿರುದ್ಯೋಗ ಯುವಕ ಯುವತಿಯರಿಗೆ ಉದ್ಯೋಗ ಮೇಳ, ಸದುಪಯೋಗ ಪಡೆದು ಕೊಳ್ಳಲು – ಡಾ, ಪಿ.ಎಂ.ವಾಗಿಶಯ್ಯ ಮನವಿ

**ಸಿಹಿ ಕಹಿ ಸುದ್ದಿ,**

**ಕೊಟ್ಟೂರು :** ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೊಟ್ಟೂರು ಪಟ್ಟಣದ ಹೊರ ವಲಯದಲ್ಲಿ ಬರುವ ಇಂದು ಪದವಿ ಕಾಲೇಜಿನಲ್ಲಿ ದಿನಾಂಕ 20.06.2025 ರಂದು ಹಮ್ಮಿ ಕೊಳ್ಳಲಾಗಿರುವ ನಿರುದ್ಯೋಗ ಯುವಕ ಯುವತಿಗಾಗಿ ಉದ್ಯೋಗ ಮೇಳವನ್ನು ಸಮರ್ಥನಂ ಅಂಗವಿಕಲರ ಸಂಸ್ಥೆ ಬಳ್ಳಾರಿ ಹಾಗೂಇಂದುಕಾಲೇಜ್ಕೊಟ್ಟೂರುಇವರುಗಳ ಸಂಯುಕ್ತ ಅಕ್ಷರದಲ್ಲಿ ನಡೆಯುವಂತಹ ಉದ್ಯೋಗ ಮೇಳಕ್ಕೆ ಯುವಕ ಯುವತಿಯರು ವಯೋಮಿತಿ 18 ರಿಂದ 35 ವರ್ಷ ಇರಬೇಕು ಮತ್ತು ಶೈಕ್ಷಣಿಕ ವಿದ್ಯಾರ್ಥಿಯು ಎಸ್.ಎಸ್.ಎಲ್.ಸಿ ಪದವಿ ಪೂರ್ವ ಮತ್ತು ಪದವಿ ಪಡೆದಿರುವಂತಹ ಎಲ್ಲಾ ಉದ್ಯೋಗಾರ್ತಿ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ. ಹಲವಾರು ಉದ್ಯೋಗಾಂಕಾಕ್ಷಿಗಳಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು ಈ ಉದ್ಯೋಗ ಮೇಳದ ಉದ್ದೇಶವಾಗಿದೆ. ಈ ಮೇಳದಲ್ಲಿ 20 ಕ್ಕೂ ಹೆಚ್ಚು ಉದ್ಯೋಗದಾತರ ಭಾಗವಹಿಸುವಿಕೆಯನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಹಾಗೂ ಈ




ಉದ್ಯೋಗ ಮೇಳದಲ್ಲಿ ವಿಶೇಷ ಚೇತನರಿಗೆ ಅವಕಾಶವನ್ನು ನೀಡಲಾಗಿದೆ. ಆದ ಕಾರಣ ಎಲ್ಲಾ ಅರ್ಹ ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ಸ್ವ ವಿವರಗಳೊಂದಿಗೆ ಆಗಮಿಸಿ ಈ ಉದ್ಯೋಗ ಮೇಳದ ಲಾಭವನ್ನು ಪಡೆದು ನಿಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿ ಕೊಳ್ಳಬೇಕೆಂದು ವಿನಂತಿಸಿ ಕೊಂಡಿರುತ್ತಾರೆ. ಹಾಗೆ ಈ ಉದ್ಯೋಗ ಮೇಳವನ್ನು ಯಶಸ್ವಿ ಗೊಳಿಸಲು ತಮ್ಮ ಅಮೂಲ್ಯವಾದ ಬೆಂಬಲವನ್ನು ಬಯಸುತಿದ್ದೇವೆ ನಿಮ್ಮ ಬೆಂಬಲವೂ ಅರ್ಹರನ್ನು ತಲುಪಲು ನಮಗೆ ಸಹಾಯ ಮಾಡುತ್ತದೆ ಮತ್ತು ವಿಕಲ ಚೇತನರ ಮತ್ತು ವಿಕಲೆ ಚೇತನರು ಉದ್ಯೋಗ ಪಡೆಯುವುದರ ಮುಖಾಂತರ ತಮ್ಮ ಉಜ್ವಲ ಭವಿಷ್ಯವನ್ನು ರೂಪಿಸಿ ಕೊಳ್ಳುವಲ್ಲಿ ಪತ್ರಿಕೋದ್ಯಮದ ಸಹಾಯಸಹಕಾರಕೊಡಿಗೆಯಾಗಲಿದೆ,ಎಂದು ಡಾ. ಪಿ.ಎಂ ವಾಗೀಶಯ್ಯ ಪ್ರಾಂಶುಪಾಲರು ಹಿಂದೂ ಪದವಿ ಕಾಲೇಜ್ ಕೊಟ್ಟೂರು ಇವರು ಪತ್ರಿಕೆ ಪ್ರಕಟಣೆಯ ಮೂಲಕ ತಿಳಿಸಿರುತ್ತಾರೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ರಾಘವೇಂದ್ರ.ಸಾಲುಮನೆ.ಕೂಡ್ಲಿಗಿ**

## ಚಡಚಣ ಏತ ನೀರಾವರಿ ಯೋಜನೆ ಅವ್ಯವಸ್ಥೆ ನೋಡಿ ದಂಗಾದ ಕೆಬಿಜೆಎನ್ಎಲ್ ಎಂಡಿ!

**ಚಡಚಣ :** ಸುಮಾರು 8 ವರ್ಷಗಳ ಹಿಂದೆ 480 ಕೋಟಿ ವೆಚ್ಚದಲ್ಲಿ ಪ್ರಾರಂಭವಾದ ಚಡಚಣ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಕೆಬಿಜೆಎನ್ಎಲ್ ಎಂಡಿ ಕೆ.ಪಿ ಮೋಹನ ರಾಜ ಪರಿಶೀಲನೆ ನಡೆಸಿದರು.

ಈಸಂದರ್ಭದಲ್ಲಿಕಳಪೆಕಾಮಗಾರಿಯಕುರಿತು ಅನೇಕ ಕಡೆಗಳಲ್ಲಿ ರೈತರು ಎಂಡಿಯವರನ್ನು ಸುತ್ತುವರಿದು ಕಾಮಗಾರಿ ಮಾಡದೆ ಯೋಜನೆ ಪೂರ್ಣಗೊಂಡಿದೆ ಎಂದು ತೋರಿಸಿ ಅಧಿಕಾ-ರಿಗಳು ಹಣ ಲಪಟಾಯಿಸಿದ್ದಾರೆ ಎಂದು ಆರೋಪಿಸಿದರು ಅಷ್ಟೇ ಅಲ್ಲದೆ ರೈತರು ಸಾಬೀತು ಕೂಡಾ ಮಾಡಿದರು.

ಕೆಬಿಜೆಎನ್ಎಲ್ ಅಧಿಕಾರಿಗಳು (ಝಳಕಿ, ಆಲಮೇಲ, ಇಂಡಿ, ರಾಂಪೂರ ಇಇ, ಎಇಇಗಳು) ಕೆಲಸ ಮುಗಿಸಿದ ಕೆಲವು ಕಡೆಗಳಲ್ಲಿ ಮಾತ್ರ ಕರೆದುಕೊಂಡು ಹೋದರು (ಜಾಣಕುರುಡರಂತೆ) ಎಂ.ಡಿ ಭೇಟಿ ನೀಡಿದ ಬಹುತೇಕ ಕಡೆಗಳಲ್ಲಿ ವಾಸ್ತವವಾಗಿ ಕಾಮಗಾರಿ ಮುಗಿಯದೆ ಇರುವದು ಗಮನಕ್ಕೆ ಬಂದಿತು. ಆದರೇ ಅಧಿಕಾರಿಗಳ ದಾಖಲಾತಿಯಲ್ಲಿ (ರಿಪೊ?ರ್ಟಗಳಲ್ಲಿ) ಎಲ್ಲ ಕಾಮಗಾರಿ ಮುಗಿದು ಗುತ್ತಿಗೆದಾರರ ಬಿಲ್ಲು ಕೊಟ್ಟಿರುವ ಸಂಗತಿ ಬೆಳಕಿಗೆ ಬಂದಿತು. ಎಂ.ಡಿ ಅಧಿಕಾರಿಗಳಿಗೆ ಯೋಜನೆಯ ಕುರಿತು ಮಾಹಿತಿ ಕೇಳಿದಾಗ ಬಹುತೇಕ ಅಧಿಕಾರಿಗಳು ಉತ್ತರಕೊಡಲು ತಡಬಡಾಯಿಸಿದರು. ಅಧಿಕಾರಿಗಳು ಕಾಂಟ್ರ್ಯಾಕ್ಟರ ಮೇಲೆ ಜವಾಬ್ದಾರಿ ಹೊರೆಸುವ ಪ್ರಯತ್ನವನ್ನು ಮಾಡಿದರು.

ಚಡಚಣ ಏತ ನೀರಾವರಿ ವ್ಯಾಪಿಯಲ್ಲಿ 600 ಔಟಲೆಟ್‌ಗಳಿದ್ದು ಇದರಲ್ಲಿ ಕೇವಲ 150 ಔಟಲೆಟ್‌ಗಳಲ್ಲಿ ಮಾತ್ರ ಪ್ರಾಯೋಗಿಕವಾಗಿ ನೀರು ಹರಿದಿರುವದನ್ನು ಸ್ವತ ಅಧಿಕಾ-ರಿಗಳ ಒಪ್ಪಿಕೊಂಡರು. ಆದರೆ ನೀರು ರೈತರ ಹೊಲಗಳಿಗೆ ತಲುಪುವ ವ್ಯವಸ್ಥೆ ಎಂಡಿ ಭೇಟಿ ನೀಡಿದ ಪ್ರತಿ ಸ್ಥಳಗಳಲ್ಲಿ ರೈತರು ಯೋಜನೆಯ ಅಕ್ರಮದ ಕುರಿತು ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ನಾಗಠಾಣ ಶಾಸಕರಾದ ವಿಠ್ಠಲ ಕಟಕದೊಂಡ ಮತ್ತು ಕೆಬಿಜೆಎನ್ಎಲ್ ಎಲ್ಲ ಹಂತದ ಅಧಿಕಾರಿಗಳು ಹಾಜರಿದ್ದರು.

ನಂತರ ಚಡಚಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೆಂಗಳುರಿನ ಮೋಹನ ಕುಮಾರ ತಾವು ಕಳೆದ



ಮೂರು ದಿನಗಳಿಂದ ಇಂಡಿ ಮತ್ತು ಚಡಚಣ ತಾಲೂಕುಗಳ ಕೆರೆ ತುಂಬುವ ಯೋಜನೆ ಮತ್ತು ಚಡಚಣ ಏತ ನೀರಾವರಿ ಯೋಜನೆ ಕುರಿತು ಅವಲೋಕನ ನಡೆಸಿದ್ದೆನೆ. ಚಡಚಣ ಏತ ನೀರಾವರಿಯ ವಿಷಯದಲ್ಲಿ ಲೋಪಗಳು ನಡೆದಿರುವದು ನನ್ನ ಗಮನಕ್ಕೆ ಬಂದಿದೆ. ಈ ದಿಸೆಯಲ್ಲಿ ಅಧಿಕಾರಿಗಳ ಸಭೆಯನ್ನು ನಡೆಸಿ ಕುಲಂಕುಶವಾಗಿ ಪರಿಶೀಲನೆ ನಡೆಸುತ್ತೆನೆ ಮತ್ತು 6 ತಿಂಗಳಲ್ಲಿ ಈ ಯೋಜನೆ ವ್ಯವಸ್ಥಿತ ರೀತಿಯಲ್ಲಿ ಕಾರ್ಯರೂಪಗೊಳ್ಳುವಂತೆ ಮಾಡುತ್ತೆನೆ. ನಾಗಠಾಣ ಶಾಸಕರು ನನಗೆ ಅನೇಕ ಬಾರಿ ಭೇಟಿಯಾಗಿ ಈ ಯೋಜನೆಯ ಕುರಿತು ಮಾಹಿತಿಯನ್ನು ನೀಡಿದ್ದಾರೆ. ಈ ಯೋಜನೆಗೆ ಸ್ಕಾಡ ಅಳವಡಿಸಬೇಕು ಎಂಬ ವಿನಂತಿಯನ್ನು ಮಾಡಿದ್ದಾರೆ. ಈ ದಿಸೆಯಲ್ಲಿ ಇಗಾಗಲೆ ಸರಕಾರದ ಮಟ್ಟದಲ್ಲಿ ಪ್ರಕ್ರಿಯ ಪ್ರಾರಂಭವಾಗಿದೆ ಎಂದು ಹೇಳಿದರು.

ಯೋಜನೆ ಹಳ್ಳ ಹಿಡಿಯುವಂತೆ ಮಾಡಿದ ಅಧಿಕಾರಿಗಳ ಮೇಲೆ ಕ್ರಮ ಕೈಕೊಳ್ಳುತ್ತಿರಾ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು ನಾನು ಮೊದಲು ಯೋಜನೆ ಸಮಗ್ರ ಮಾಹಿತಿಯನ್ನು ಪಡೆಯುತ್ತೆನೆ ಮತ್ತು ಮುಂದೆ ಕ್ರಮ ಕೈಕೊಳ್ಳುವಾಗಿ ಹೇಳಿದರು. ಚಡಚಣ ತಾಲೂಕಿನ ಕೆರೆಗಳನ್ನು ತುಂಬುವ ಕುರಿತು ಕೇಳಿದ ಪ್ರಶೆಗೆ ಅಧಿಕಾರಿಗಳು ಶೇ.30 ರಷ್ಟು ಕೆರೆ ತುಂಬಿದ್ದವೆ ಎಂದು ಸುಳ್ಳು ಹೇಳಿದರು ಅದಕ್ಕೆ ಪತ್ರಕರ್ತರು ಮೊನ್ನೆ ಕೆಲವು ದಿನಗಳಿಂದಈ ಭಾಗದಲ್ಲಿ ಭಾರಿ ಮಳೆ ಬಂದ ಪರಿಣಾಮ ಕೆರೆಗಳು ಶೇ.30 ತುಂಬಿವೆ ಹೊರತಾಗಿ ಇವರು ಬಿಟ್ಟನೀರಿನಿಂದಲ್ಲ ಎಂದರು. ಮಧ್ಯಪ್ರವೇಶಿಸಿದ ಎಂ.ಡಿ.ಮೋಹನ ರಾಜ ಅವರು ಖಂಡಿತ ಈ ಭಾಗದ ಕೆರೆಗಳನ್ನು ಮುಂದಿನ ದಿನಗಳಲ್ಲಿ 70% ತುಂಬಿಸುವ ಆಶ್ವಾಸನೆಯನ್ನು ನೀಡುವದಾಗಿ ಹೇಳಿದರು.

ಚಡಚಣ ನೀರಾವರಿ ಯೋಜನೆ 8 ವರ್ಷಗಳ ಹಿಂದೆ 480 ಕೋಟಿ ರೂ ವೆಚ್ಚದಲ್ಲಿ ಪ್ರಾರಂಭವಾಗಿದೆ ಆದರೇ ಈಗ ಅಂದಾಜು ವೆಚ್ಚ 2000 ಕೋಟಿ ರೂ ಬೇಕಾಗುತ್ತದೆ ಎಂದು ಸ್ವತ: ಎಂಡಿ ಕೆ.ಪಿ ಮೋಹನ ರಾಜ

ಕೆಬಿಜೆಎನ್ಎಲ್ ಟೇಲ್ ಎಂಡ ಕಾಲುವೆಗಳಿಗೆ ನೀರು ಹರಿಸುವ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ ಕ್ರಮ ಕೈಕೊಳ್ಳುವಾಗಿ ಹೇಳಿದರು. ಈ ಸಂದರ್ಭದಲ್ಲಿ ಕೆಬಿಜೆಎನ್ಎಲ್ ಮುಖ್ಯ ಇಂಜನೀಯರ ಎಚ್. ರವಿಶಂಕರ, ಸುಪ-ರಿಡೆಂಟ್ ಇಂಜನೀಯರ ಮನೋಜ-ಕುಮಾರ ಗಡಬಳ್ಳಿ, ಆಲಮೇಲ, ಝಳಕಿ ಮತ್ತು ರಾಂಪೂರದ ಇಇ, ಎಇಇಗಳು ಹಾಜರಿದ್ದರು. ಶಾಸಕ ವಿಠ್ಠಲ ಕಟಕದೊಂಡ ಅವರು ಮಾತನಾಡಿ, ಚಡಚಣ ಏತ ನೀರಾವರಿ ಚಡಚಣ ಭಾಗದ ರೈತರ ಹತ್ತಾರ ವರ್ಷದ ಕನಸಾಗಿದೆ. ಆದರೆ ಹತ್ತು ವರ್ಷಗಳಲ್ಲಿ ಆಗಿಹೋದ ಅಧಿಕಾರಿಗಳು ಯೋಜನೆಯನ್ನು ಸಂಪೂರ್ಣವಾಗಿ ಹಳ್ಳ ಹಿಡಿಸಿದ್ದಾರೆ. ನಾನು ಈ ಯೋಜನೆ ಜಾರಿಯಾಗಿ ರೈತರ ಹೊಲಗಳಿಗೆ ನೀರು ಹರಿಯುವವರೆಗೆ ಸುಮ್ಮನೆ ಕೂಡುವದಿಲ್ಲ.

ಚಡಚಣಭಾಗದರೈತರಿಗೆಯಾವುದೆನೀರಾವರಿ ಯೋಜನೆಗಳುಮುಟ್ಟಿಲ್ಲ,ಈಯೋಜನೆಯನ್ನು ಅಧಿಕಾರಿಗಳು ಹಳ್ಳ ಹಿಡಿಸುತ್ತಿದ್ದಾರೆ. ನಾನು ಇದಕ್ಕೆ ಆಸ್ಪದ ನೀಡುವದಿಲ್ಲ. ಆದ್ದರಿಂದಲೆ ಎಂಡಿ ಇವರನ್ನು ಪ್ರತ್ಯಕ್ಷ ಸಮೀಕ್ಷೆಗೆ ಇಲ್ಲಿ ಕರೆದುಕೊಂಡು ಬಂದಿದ್ದೆನೆ ಎಂದು ತಿಳಸಿದರು.

# ಎಸ್.ಸಿ.ಪಿ–ಟಿ.ಎಸ್.ಪಿ ಅನುದಾನ ಸಮರ್ಪಕವಾಗಿ ಬಳಕೆಯಾಗಬೇಕು: ಜಿಲ್ಲಾಧಿಕಾರಿ ನಲಿನ್ ಅತುಲ್

**ಕೊಪ್ಪಳ :** ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿಗಾಗಿ ಇರುವ ಅನುದಾನ ಜಿಲ್ಲೆಯಲ್ಲಿ ಸಮರ್ಪಕವಾಗಿ ಬಳಕೆಯಾಗಬೇಕು ಮತ್ತು ಯಾವುದೇ ಕೆಲಸ ಹಾಗೂ ಕಾಮಗಾರಿಗಳು ಪೆಂಡಿಂಗ್ ಇರದಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಶುಕ್ರವಾರ ಜಿಲ್ಲಾಧಿಕಾ–ರಿಗಳ ಕಛೇರಿ ಸಭಾಂಗಣದಲ್ಲಿ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಅಧಿನಿಯಮ–2013 ರನ್ವಯ ಅನುಸೂಚಿತ ಜಾತಿಗಳು ಉಪಯೋಜನೆ, ಬುಡಕಟ್ಟು ಉಪಯೋಜನೆ ಹಾಗೂ ಪರಿಶಿಷ್ಟ ಜಾತಿ, ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಹಿಂದಿನವರ್ಷದಯಾವುದೇಕೆಲಸ ಕಾಮಗಾರಿಗಳು ಬಾಕಿ ಇರದಂತೆ ನೋಡಿಕೊಳ್ಳಬೇಕು ಮತ್ತು ಒಂದು ವರ್ಷ ಮುಂಚಿತವಾಗಿ ಯೋಜನೆಗಳನ್ನು ರೂಪಿಸಬೇಕು. ಅಂದಾಗ ಆ ಕೆಲಸಗಳನ್ನು ಬೇಗನೆ ಮುಗಿಸಲು ಅನುಕೂಲವಾಗುತ್ತದೆ ಮತ್ತು ಯಾವುದೇ ಕೆಲಸಗಳಿಗೆ ವಿಳಂಬವಾಗುವುದಿಲ್ಲ. ಪರಿಶಿಷ್ಟ ಜಾತಿಯ ಕಾಲನಿಗಳಲ್ಲಿ ಶಾಲೆ. ಅಂಗನವಾಡಿ. ಗ್ರಂಥ–ಾಲಯಗಳು. ರಸ್ತೆ. ಚರಂಡಿ. ನೀರು ಏನು ಅವಶ್ಯಕತೆ ಇದೆ ಅವುಗಳ ಯೋಜನೆಗಳನ್ನು ರೂಪಿಸಬೇಕೆಂದು ಹೇಳಿದರು.

ದೌರ್ಜನ್ಯಕ್ಕೆ ಒಳಗಾಗಿ ಮರಣ. ರೇಪ್ ಹಾಗೂ ಇಂಜೂ–ರಿಯಾದ ಪರಿಶಿಷ್ಟ ಜಾತಿಯ



ಫಲಾನುಭವಿಗಳಿಗೆ ಕನಿಷ್ಠ 5 ಲಕ್ಷದಿಂದ ಗರಿಷ್ಠ 10 ಲಕ್ಷಗಳವರೆಗೆ ಸಮಾಜ ಕಲ್ಯಾಣ ಇಲಾಖೆಯಿಂದ ಫಲಾನುಭವಿಗಳಿಗೆ ನೀಡುವ ಪರಿಹಾರ ಸಕಾಲದಲ್ಲಿ ಅವರಿಗೆ ಸಿಗುವಂತಾಗಲಿ.ತಮಗೆಅವಶ್ಯಕತೆ ಇದ್ದರೆ ಹೆಚ್ಚಿನ ಅನುದಾನವನ್ನು ನೀಡಲಾಗುವುದು. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ನಮ್ಮ ಜಿಲ್ಲೆಗೆ ನೀಡಿದ 400 ಕೋಟಿ ಅನುದಾನದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಅಭಿವೃದ್ಧಿಗಾಗಿ ಆ ಅನುದಾನದಲ್ಲಿ 100 ಕೋಟಿ ರೂ. ವರೆಗೆ ಉಪ ಯೋಗಿಸಿಕೊಳ್ಳಬಹುದಾಗಿದೆ ಎಂದರು.

ಈ ಸಭೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ. ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಷ್ಮಾ ಹಾನಗಲ್. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಅಜ್ಜಪ್ಪ ಸೊಗಲದ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮರಬನಳ್ಳಿ. ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರಾದ ನಾಗರಾಜ ಸೇ–ರಿದಂತೆ ಜಿಲ್ಲಾ ಮಟ್ಟದ ಇತರೆ ವಿವಿಧ ಇಲಾಖೆಯ ಅಧಿಕಾ–ರಿಗಳು ಉಪಸ್ಥಿತರಿದ್ದರು.

# ಜುಲೈ 12 ರಂದು ರಾಷ್ಟ್ರೀಯ ಲೋಕ್ ಅದಾಲತ್: ನ್ಯಾ.ಮಹಾಂತೇಶ ದರಗದ್

**ಕೊಪ್ಪಳ :** ಜುಲೈ 12 ರಂದು ಕೊಪ್ಪಳ ಜಿಲ್ಲೆಯಾದ್ಯಂತ ರಾಷ್ಟ್ರೀಯ ಲೋಕ್ ಅದಾಲತ್ ಹಮ್ಮಿಕೊಳ್ಳಲಾಗಿದ್ದು, ಇದರ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾ. ಮಹಾಂತೇಶ ಎಸ್. ದರಗದ್ ಹೇಳಿದರು.

ಅವರು ಶುಕ್ರವಾರ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿ ಸಭಾಂಗಣದಲ್ಲಿ ಜುಲೈ 12 ರಂದು ನಡೆಯಲಿರುವ ರಾಷ್ಟ್ರೀಯ ಲೋಕ್ ಅದಾಲತ್ ಕುರಿತು ಮಾಹಿತಿ ನೀಡಲು ಕರೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ. ಸಿ.ಚಂದ್ರಶೇಖರ ಅವರ ನಿರ್ದೇಶನದಂತೆ ಜುಲೈ 12 ರಂದು ಕೊಪ್ಪಳ ಜಿಲ್ಲೆಯಲ್ಲಿಯೂ ರಾಷ್ಟ್ರೀಯ ಲೋಕ್ ಅದಾಲತ್ ನಡೆಯಲಿದ್ದು, ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ದಾವೆದಾರರು ಹಾಗೂ ಕಕ್ಷಿದಾರರು ಈ ಲೋಕ ಅದಾಲತ್‌ನಲ್ಲಿ ಭಾಗವಹಿಸಿ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದರು.

ಸಾರ್ವಜನಿಕರು ತಮ್ಮ ವ್ಯಾಜ್ಯ ಪೂರ್ವ ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಿಗೆ ತಕ್ಷಣ ಪರಿಹಾರ ಪಡೆದುಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದೆ. ಪಕ್ಷಗಾರರು ತಮ್ಮ ವ್ಯಾಜ್ಯಗಳನ್ನು ಪರಸ್ಪರ ರಾಜಿ ಸಂಧಾನ ಮಾಡಿಕೊಳ್ಳುವ ಮೂಲಕ ತಮ್ಮ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಿಕೊಳ್ಳಬಹುದು ಎಂದು ಅವರು ತಿಳಿಸಿದರು.

ರಾಜಿ ಸಂಧಾನಕ್ಕಾಗಿ ಸಿವಿಲ್ ದಾವೆಗಳು, ಭೂ–ಸ್ವಾಧೀನ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ದರಖಾಸ್ತು ಅರ್ಜಿಗಳು, ಕಾರ್ಮಿಕ ಪ್ರಕರಣಗಳು, ಎಂ–ಎಂಆರ್‌ಡಿ ಪ್ರಕರಣಗಳು, ಚೆಕ್ ಬೌನ್ಸ್ ಪ್ರಕರಣಗಳು, ಮೋಟಾರು ಅಪಘಾತ ಪರಿಹಾರ ಪ್ರಕರಣಗಳು, ವೈವಾಹಿಕ ಪ್ರಕರಣಗಳು ಹಾಗೂ ರಾಜಿ ಆಗಲು ಅರ್ಹವಿರುವ ಕ್ರಿಮಿನಲ್ ಪ್ರಕರಣಗಳು ಸೇರಿದಂತೆ ಹಲವಾರು



ಪ್ರಕರಣಗಳನ್ನು ರಾಜಿಸಂಧಾನದ ಮೂಲಕ ಇತ್ಯಥ–ರ್ ಪಡಿಸಿಕೊಳ್ಳಬಹುದಾಗಿದೆ. ರಾಜಿ ಸಂಧಾನದಲ್ಲಿ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಂಡರೆ ಪ್ರಕರಣವು ಇಬ್ಬ–ರಿಗೂ ಒಪ್ಪಿಗೆಯಾಗುವಂತೆ ಕೊನೆಗೊಂಡು ಇಬ್ಬರ ಬಾಂಧವ್ಯ ಮೊದಲಿನಂತೆ ಉಳಿಯುತ್ತದೆ. ತಾವು ನ್ಯಾಯಾಲಯಕ್ಕೆ ತುಂಬಿದ ಕೋರ್ಟ್ ಶುಲ್ಕವನ್ನು ಸಂಪೂರ್ಣವಾಗಿ ವಾಪಸ್ ನೀಡಲಾಗುವುದು ಎಂದು ಹೇಳಿದರು.

ಪ್ರಕರಣವು ರಾಜಿಸಂಧಾನದ ಮೂಲಕ ಇತ್ಯಥ–ರ್ವಾದರೆ ಉಭಯ ಪಕ್ಷಗಾರರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ. ಇದರಿಂದ ಹಣ, ಸಮಯ ಹಾಗೂ ಸಂಬಂಧವನ್ನು ಉಳಿಸಿಕೊಳ್ಳಲು ಸಹಾಯಕವಾಗುತ್ತದೆ. ಕಾರಣ ಪಕ್ಷಗಾರರು ಜುಲೈ 12 ರಂದು ಕೊಪ್ಪಳ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಜರಗುವ ರಾಷ್ಟ್ರೀಯ ಲೋಕ ಅದಾಲತ್‌ನ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಜಿಲ್ಲಾ ಸಾಥಿ ಸಮಿತಿ: ಜಿಲ್ಲೆಯ ವಿವಿಧ ಇಲಾಖೆಯ ಅಧಿಕಾ–ರಿಗಳನ್ನೊಳಗೊಂಡಂತೆ ಜಿಲ್ಲಾ ಸಾಥಿ ಸಮಿತಿಯನ್ನು ರಚಿಸಲು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಇವರು ನಿರ್ದೇಶನದಂತೆ ಕೊಪ್ಪಳ ಜಿಲ್ಲಾ ಸಾಥಿ ಸಮಿತಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು, ಜಿಲ್ಲೆಯ ಶಿಕ್ಷಣಾಧಿಕಾರಿಗಳು, ಜಿಲ್ಲೆಯ ಆರೋಗ್ಯ ಅಧಿಕಾರಿಗಳು, ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಅಧಿಕಾರಿಗಳು, ಪೊಲೀಸ್ ಇಲಾಖೆ ಅಧಿಕಾರಿಗಳು, ಪ್ಯಾನಲ್ ವಕೀಲರು, ಪ್ಯಾರಾ ಲೀಗಲ್ ವಾಲಂಟಿಯರ್ಸ್‌ಗಳು ಈ ಸಮಿತಿಗೆ ಸದಸ್ಯರಾಗಿರುತ್ತಾರೆ.

ಸಮಿತಿಯ ಮುಖ್ಯ ಉದ್ದೇಶ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಆಧಾರ್ ಕಾರ್ಡ್‌ನ್ನು ಮಾಡಿಸದೇ ಇರುವಂತಹ ಪರಿತ್ಯಕ್ತ ಮಕ್ಕಳ ಗುರುತಿಸುವಿಕೆ ಹಾಗೂ ಆಧಾರ ಕಾರ್ಡ್ ನೋಂದಣಿ ಮಾಡುವುದು ಮತ್ತು ಈ ಮೂಲಕ ಪರಿತ್ಯಕ್ತ ಮಕ್ಕಳಿಗೆ ಕಾನೂನು ಬದ್ಧವಾಗಿ ಸಿಗಬೇಕಾದ ಸರಕಾರಿ ಸವಲತ್ತುಗಳನ್ನು ಒದಗಿಸುವುದಾಗಿರುತ್ತದೆ. ಈ ಕಾರಣಕ್ಕಾಗಿ ಜಿಲ್ಲೆಯ ಪ್ರಜ್ಞಾವಂತರು ಮೇಲೆ ಹೇಳಿದಂತಹ ಮಕ್ಕಳು ಇದ್ದಲ್ಲಿ ಈ ಕುರಿತು ಸದಸ್ಯರಿಗೆ ಮಾಹಿತಿ ನೀಡಬೇಕೆಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ನೇಮಕಾತಿ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೊಪ್ಪಳದಲ್ಲಿ ವಕೀಲರುಗಳಿಗೆ ಮುಖ್ಯ ಕಾನೂನು ಅಭಿರಕ್ಷಕರು, ಉಪ ಮುಖ್ಯ ಕಾನೂನು ಅಭಿರಕ್ಷಕರು ಹಾಗೂ ಸಹಾಯಕ ಕಾನೂನು ಅಭಿರಕ್ಷಕರ ನೇಮಕಾತಿಗಾಗಿ ಅರ್ಜಿಯನ್ನು ಆಹ್ವಾನಿಸಿದ್ದು, ಜೂನ್ 9 ರಿಂದ ಜೂನ್ 19 ರೊಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ನಿಗದಿತ ಅರ್ಜಿ ನಮೂನೆ ಭರ್ತಿ ಮಾಡಿ ಸಾಯಂಕಾಲ 6 ಗಂಟೆಯ ಒಳಗಾಗಿ ಅರ್ಹತೆ ಹೊಂದಿದ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ https://koppal.dcourts.gov.in ಹಾಗೂ https://koppal.dcourts.gov.in/dlsa-tl-sa/ ಲಿಂಕನ್ನು ಸಂಪರ್ಕಿಸಬಹುದು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾ. ಮಹಾಂತೇಶ ಎಸ್. ದರಗದ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಈ ಪತ್ರಿಕಾಗೋಷ್ಠಿಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸುರೇಶ ಜಿ., ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಪ್ರ. ದ.ಸ ಎಂ.ಬಿ.ಹನೀಫ್ ಸೇರಿದಂತೆ ನ್ಯಾಯಾಲಯದ ಇತರೆ ಅಧಿಕಾರಿ, ಸಿಬ್ಬಂದಿ ಉಪಸ್ಥಿತರಿದ್ದರು.

# ಸಂಸದರಿಂದ ಮೊಬೈಲ್ ಫಿಶ್ ಕ್ಯಾಂಟೀನ್ ವಿತರಣೆ



**ಕೊಪ್ಪಳ :** ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಮಂಜೂರಾಗಿರುವ ಮತ್ಸ್ಯ ವಾಹಿನಿ ಮೊಬೈಲ್ ಫಿಶ್ ಕ್ಯಾಂಟೀನ್‌ಗಳನ್ನು ಶುಕ್ರವಾರದಂದು ಕೊಪ್ಪಳ ಲೋಕಸಭಾ ಸದಸ್ಯರಾದ ಕೆ.ರಾಜಶೇಖರ ಹಿಟ್ನಾಳ್ ಅವರು ಜಿಲ್ಲಾಡಳಿತ ಭವನದ ಆವರಣದಲ್ಲಿ ಫಲಾನುಭವಿಗಳಿಗೆ ವಿತರಿಸಿದರು.

ನಂತರ ಮಾತನಾಡಿದ ಸಂಸದರು ಸ್ವ ಉದ್ಯೋಗ ಹಾಗೂ ಸ್ವಾವಲಂಬನೆಗೆ ಮೀನುಗಾರಿಕೆ ಇಲಾಖೆಯಿಂದ ನೀಡಿರುವ ವಾಹನಗಳನ್ನು ಸಮರ್ಪಕವಾಗಿ ಬಳಸಿಕೊಂಡು ಆರ್ಥಿಕವಾಗಿ ಪ್ರಗತಿ ಸಾಧಿಸಿ ಎಂದು ಫಲಾನುಭವಿಗಳಿಗೆ ತಿಳಿಸಿದರು.

ಮೀನುಗಾರಿಕೆ ಉಪನಿರ್ದೇಶಕರಾದ ಶ್ರೀನಿವಾಸ ಕುಲಕರ್ಣಿ ಅವರು ಮಾತನಾಡಿ, ಈ ಯೋಜನೆಯಡಿ ಕೊಪ್ಪಳ ಜಿಲ್ಲೆಗೆ 3 ಮೊಬೈಲ್ ಫಿಶ್ ಕ್ಯಾಂಟೀನ್‌ಗಳನ್ನು ಹಂಚಿಕೆ ಮಾಡಲಾಗಿದೆ. ಈ ಯೋಜನೆಯಡಿ ಫಲಾನುಭವಿಯು ರೂ.50,000/– ಗಳ ಠೇವಣಿ ಮಾಡಿ ನಂತರದಲ್ಲಿ ಪ್ರತಿ ತಿಂಗಳು ರೂ.3000/–ರಂತೆ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮಕ್ಕೆ ಬಾಡಿಗೆ ಭರಿಸಬೇಕು ಎಂದು ಯೋಜನೆಯ ಮಾಹಿತಿ ನೀಡಿದರು. ಈ ಸಂದರ್ಭ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಲಿಂಗರಾಜು ಟಿ., ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ, ಪಶುಪಾಲನಾ ಇಲಾಖೆಯ ಉಪನಿರ್ದೇಶಕರಾದ ಪಿ.ಎಂ.ಮಲ್ಲಯ್ಯ, ಮೀನುಗಾ–ರಿಕೆ ಸಹಾಯಕ ನಿರ್ದೇಶಕರಾದ ಆನಂದ ಪಾಟೀಲ, ಮೀನುಗಾರಿಕೆ ಸಹಕಾರಿ ಸಂಘದ ಅಧ್ಯಕ್ಷರಾದ ಏಕನಾಥ, ಉಪಾಧ್ಯಕ್ಷರಾದ ಸಯ್ಯದ್ ಮಹೆಬೂಬ್, ಎಫ್‌ಎಫ್‌ಪಿಒ ಅಧ್ಯಕ್ಷರಾದ ಮಂಜುನಾಥ ಕಲಾಲ್, ಫಲಾನುಭವಿಗಳು ಹಾಜರಿದ್ದರು.

# ಕರಿ ಹರಿದ ಬಿಳಿ ಎತ್ತು ಸಂಭ್ರಮಿಸಿದ ರೈತರು

**ಚಿಮ್ಮಡ :** ರೈತರ ಹಬ್ಬವಾದ ಕಾರ ಹುಣ್ಣಿಮೆ ನಿಮಿತ್ಯ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಕರಿ ಹರಿಯುವ ಸ್ಪರ್ಧೆಯಲ್ಲಿ ಬಿಳಿ ಎತ್ತು ಕರಿ ಹರಿಯುವ ಮೂಲಕ ವಿಜಯ ಸಾಧಿಸಿತು.

ಬುಧವಾರ ಸಂಜೆ ಗ್ರಾಮದ ಪ್ರಮುಖ ಬೀದಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಕರಿ ಹ–ರಿಯುವ ಸ್ಪರ್ಧೆಯಲ್ಲಿ ಕೆಂಪು ಎತ್ತು ಹಾಗೂ ಬಿಳಿ ಎತ್ತುಗಳನ್ನು ಸ್ಪರ್ಧೆಗೆ ಅಣಿಗೊಳಿಸಲಾಗಿತ್ತು. ಗ್ರಾಮದ ಪ್ರಮುಖ–ರಿಂದ ತೆಂಗಿನಕಾಯಿ ಒಡೆಯುವ ಮೂಲಕ ಸ್ಪರ್ಧೆಗೆ ಚಾಲನೆ ನೀಡಲಾಯಿತು.

ಮೊದಲು ಕೆಂಪು ಎತ್ತು ಪ್ರಥಮ ಸ್ಥಾನದಲ್ಲಿತ್ತಾದರೂ ನಂತರ ಬಿಳಿ ಎತ್ತು ಅದನ್ನು ಹಿಂದಿಕ್ಕಿ ಮುನ್ನುಗ್ಗುವ ಮೂಲಕ ಕರಿ ಹರಿಯಿತು.

ಬಿಳಿ ಎತ್ತು ಕರಿ ಹರಿದರೆ ಫಲವತ್ತಾದ ಬೆಳೆ ಬಂದು ರೈತರಿಗ ಲಾಭ ಬರುವುದೆಂಬ ಪ್ರತೀತಿ ಇದ್ದು ಕರಿ ಹರಿಯುತ್ತಲೇ



ಯುವಕರು, ರೈತರು ಪಟಾಕಿ ಸಿಡಿಸುವ ಮೂಲಕ ಸಂಭ್ರಮಿಸಿದರು. ಗ್ರಾಮದ ಪ್ರಮುಖರಾದ ರಾಮಣ್ಣ ಮುಗಳಖೋಡ, ಬಿ. ಎಸ್. ಪಾಟೀಲ, ಆರ್. ಎಂ. ಬಗನಾಳ, ಅಣ್ಣಪ್ಪಗೌಡ ಪಾಟೀಲ, ಮಂಡಲಿಕಪ್ಪಾ ಪೂಜಾರಿ, ಬಾಳಪ್ಪಾ ಹಳಿಂಗಳಿ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪೂಜಾರಿ, ಅಶೋಕ ಧಡೂತಿ, ದುಂಡಪ್ಪಾ ಪಾಟೀಲ ಹಾಗೂ ಗ್ರಾಮ ಪಂಚಾಯತಿ ಸದಸ್ಯರು, ಪಿಕೆಪಿ–ಎಸ್ ಬ್ಯಾಂಕ್ ನಿರ್ದೇಶಕರು ಸೇರಿದಂತೆ ಹಲವಾರು ಪ್ರಮುಖರೊಂದಿಗೆ ರೈತರು ಉಪಸ್ಥಿತರಿದ್ದರು. ಬನಹಟ್ಟಿ ಎ.ಎಸ್.ಐ. ಶಿವಪ್ಪಾ ಹುದ್ದಾರ ಅವರ ನೇತ್ರತ್ವದಲ್ಲಿ ಸೂಕ್ತ ಬಂದೋಬಸ್ತ ಏರ್ಪಡಿಸಲಾಗಿತ್ತು.

# ಸಾಧಕ ವಿದ್ಯಾರ್ಥಿಗಳಿಗೆ ಪುರಸ್ಕಾರ




**ಚಿಮ್ಮಡ :** ಇಲ್ಲಿನ ಗ್ರಾಮ ಪಂಚಾಯತಿಯಿಂದ ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗುರುವಾರ ಸತ್ಕರಿಸಿ ಗೌರವಿಸಲಾಯಿತು.

ಸ್ಥಳಿಯ ಗ್ರಾಮ ಪಂಚಾಯತಿ ಆವರಣದಲ್ಲಿಯ ಸರಕಾರಿ ಪದವಿ ಪೂರ್ವ ಮಹಾ ವಿದ್ಯಾಲಯದಲ್ಲಿ ಹಾಗೂ ಸರಕಾರಿ ಪ್ರೌಢ ಶಾಲೆಯಲ್ಲಿ ಪ್ರಥ–ಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಮತ್ತು ಸರಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಎಂ. ಎಸ್, ಜಿಟ್ಟಿಯವರನ್ನು ಸತ್ಕರಿಸಿ ಗೌರವಿಸಲಾಯಿತು.

ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪೂಜಾರಿ, ಮಹಾಂತೇಶ ಜಾಲಿಕಟ್ಟಿ, ಮನೋಜ ಹಟ್ಟಿ, ಬಾಳೇಶ ಬ್ಯಾಕೋಡ, ಬಾಳಪ್ಪ ಗಡೆಪ್ಪನವರ, ಸುರೇಶ ಪೂಜಾರಿ, ತಾಲೂಕು ಪಂಚಾಯತ್ ಮಾಜಿ ಉಪಾಧ್ಯಕ್ಷ ಪ್ರಭು ಮುಧೋಳ, ತುಕಾರಾಮ ದೊಡಮನಿ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶಿವಾನಂದ ಬಿರಾದಾರ, ಗ್ರಾಮ ಪಂಚಾಯತ್ ಸಿಬ್ಬಂದಿ ಸೇ–ರಿದಂತೆ ಹಲವಾರು ಜನ ಪ್ರಮುಖರು ಉಪಸ್ಥಿತ–ರಿದ್ದರು.

# ಕಲಾಕ್ಷೇತ್ರಕ್ಕೆ ಕಲಾವಿದ ಸಿಂಧೂರ ಮಾರ್ಗಸೂಚಕ

**ಜಮಖಂಡಿ :** ದಿವಂಗತ ವಿಜಯ ಸಿಂಧೂರ ತಮ್ಮಲ್ಲಿರುವ ಕಲೆಯನ್ನು ಅದ್ಭುತವಾಗಿ ಬಳಸಿಕೊಂಡು ಸಾವಿರಾರು ವಿವಿಧ ಕಲಾಕೃತಿಗಳನ್ನು ರಚಿಸಿ ರಾಜ್ಯ, ರಾಷ್ಟ್ರ, ಅಂತರಾಷ್ಟ್ರಮಟ್ಟದಲ್ಲಿ ಬೆಳಕು ಚೆಲ್ಲುವ ಮೂಲಕ ವಿವಿಧ ಪ್ರಶಸ್ತಿಗಳನ್ನು ತಮ್ಮ ಮುಡಿಗೇ–ರಿಸಿಕೊಂಡಿದ್ದರು.

ಅವರ ಸೇವೆ ಅಮೋಘವಾಗಿದ್ದು, ಕಲಾಕ್ಷೇತ್ರಕ್ಕೆ ಸಿಂಧೂರ ಮಾರ್ಗಸೂಚಕ ರಾಗಿದ್ದಾರೆಂದು ಓಲೇಮಠದ ಆನಂದ ದೇವರು ಹೇಳಿದರು.

ನಗರದ ವಿಜಯ ಸಿಂಧೂರ ಆರ್ಟ್ ಗ್ಯಾಲರಿ ಸಭಾ ಭವನದಲ್ಲಿ ಬೆಂಗಳೂರಿನ ಕರ್ನಾಟಕ ಲಲಿತಕಲಾ ಅಕಾಡೆಮಿ, ವಿಜಯಪುರದ ಕ್ಯಾನವಾಸ್ ಆರ್ಟ ಫೌಂಡೇಷನ್ ಮತ್ತು ವಿಜಯ ಸಿಂಧೂರ ಆರ್ಟ್ ಗ್ಯಾಲರಿ ಹಮ್ಮಿಕೊಂಡಿದ್ದ ಕಲಾವಿದ ವಿಜಯ ಸಿಂಧೂರ ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಭಗವಂತ ಹೇಗಿದ್ದಾನೆ ಎಂಬುದನ್ನು ನಾವು ಯಾರೂ ನೋಡಿರುವುದಿಲ್ಲ. ಪುರಾಣ, ಪ್ರವಚನದಲ್ಲಿ ಮಾತ್ರ ಕೇಳಿದ್ದೇವೆ. ಆದರೆ ಚಿತ್ರ ಕಲಾವಿದರು



ಪುರಾಣದಲ್ಲಿ ಬರುವಂತಹ ಸನ್ನಿವೇಷಗಳನ್ನು ಆದ–ಾರವಾಗಿಟ್ಟುಕೊಂಡು ಕಲ್ಪನೆ ಮೂಲಕ ಚಿತ್ರ ಬಿಡಿಸುವ ಅಗಾಧ ಶಕ್ತಿಯನ್ನು ಚಿತ್ರ ಕಲಾವಿದರು ಹೊಂದಿರುತ್ತಾರೆ.

ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ದಿವಂಗತ ವಿಜಯ ಸಿಂಧೂರ ಅವರ ಹೆಸರಿನ ಮೇಲೆ ಕೊಡುವ ಪ್ರಶಸ್ತಿ ಯುವ ಚಿತ್ರಕಲಾವಿದರಿಗೆ ಸ್ಪೂರ್ತಿದಾಯಕವಾಗಲಿ. ಈ ಪ್ರಶಸ್ತಿ ಜ್ಞಾನದ ಜ್ಯೋತಿ ಪಸರಿಸಲಿ ಎಂದರು.

ಹಿರಿಯ ಕಲಾವಿದ ಬಾಬು ಜತ್ತಕರ್ ಮಾತನಾಡಿ, ದಿ. ವಿಜಯ ಸಿಂಧೂರ ಅವರು ನೇರ, ನಿಷ್ಠುರತೆ, ಶಿಸ್ತು ಬದ್ಧತೆಗೆ ಹೆಸರುವಾಸಿಯಾಗಿದ್ದರು. ರಾಷ್ಟ್ರ, ಅಂತರಾಷ್ಟ್ರಮಟ್ಟದ ಶ್ರೇಷ್ಠ ಕಲಾವಿದರಾದ ಇವರು ಪೋಟ್ರೇಟ್ ಪೇಂಟಿಂಗದಲ್ಲಿ ಅಪಾರ ಜ್ಞಾನವನ್ನು ಹೊಂದುವ ಮೂಲಕ ನೂರಾರು ಕಲಾಕೃತಿಗಳನ್ನು ರಚಿಸಿ ಜನ ಮನ್ನಣೆಗೆ ಪಾತ್ರರಾಗಿದ್ದರು. ಚಿತ್ರಕಲೆಯ ಜೊತೆಗೆ ಸಾಹಿತ್ಯ ಸಂಗೀತವನ್ನು ಆರಾಧಿಸುತ್ತಿದ್ದರು. ಅವರ ಚಿತ್ರ ಕಲಾಕೃತಿಗಳು ದೇಶ ವಿದೇಶದಲ್ಲಿ ರಾರಾಜಿಸುತ್ತಿವೆ ಎಂದರು.


ಹಿರಿಯ ನ್ಯಾಯವಾದಿ ಡಾ. ಟಿ. ಪಿ. ಬಾಂಗಿ ಮಾತನಾಡಿ, ನಾನು ಅವರು ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ಒಟ್ಟಾಗಿ ಕಲಿತಿದ್ದೇವೆ. ಅಂದಿನಿಂದಲೂ ಪೋಟೋಗ್ರಾಫಿ ಪೇಂಟಿಂಗನಲ್ಲಿ ಅವರು ಅಪಾರ ಆಸಕ್ತಿ ಹೊಂದಿದ್ದರು.

ವಿವಿಧ ರಾಜ್ಯಗಳಲ್ಲಿ ಚಿತ್ರಕಲಾ ಪ್ರದರ್ಶನವನ್ನು ಮಾಡಿ ಜನಮೆಚ್ಚುಗೆ ಪಡೆದುಕೊಂಡಿದ್ದರು. ಇಂದಿನ ಯುವ ಕಲಾವಿದರು ಕಲೆಯನ್ನು ಕೇವಲ ಹವ್ಯಾಸಕ್ಕಾಗಿ ಬಳಸದೆ ಅದರ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಕಲೆಯನ್ನು ಉಳಿಸಬೇಕು ಎಂದರು.

ವೇದಿಕೆಯಲ್ಲಿ ಚಿತ್ರ ಕಲಾವಿದರಾದ ಜಿ. ವಿ. ಹಂಪಣ್ಣವರ, ಬಿ.ಎಸ್.ಪಾಟೀಲ, ಪ್ರಭಾಕರ ಮಂಕಾಲ, ಎಚ್.ಎಂ. ವಿಶ್ವನಾಥ, ಶಿವು ಹೂಗಾರ, ಗಂಗಾಧರ ಮಾಯಾಚಾರಿ, ಸುಶೀಲ ತರಬರ, ಕೆ. ಬಸವರಾಜು, ಪ್ರಶಾಂತ ಮನಗೂಳಿ, ಸಂತೋಷ ಗುಡ್ಡೋಡಗಿ, ರಮೇಶ ಚವ್ಹಾಣ ಸಹಿತ ಇನ್ನೂ ಹಲವರು ಇದ್ದರು.

ಬಸವರಾಜ ಮುಸಂಡಿ, ಮಹಾನಂದಾ ಸಿಂಧೂರ, ರಾಜು ಸಿಂಧೂರ, ಜಯದೀಪ ಯಾವಗಲ, ಅಮೃತಾ ಸಿಂಧೂರ, ಜ್ಯೋತಿ ಯಾವಗಲ, ಸೋಮು ಸಿಂಧೂರ, ಸ್ವಪ್ನಿಲ ಸಿಂಧೂರ, ಪ್ರಥಾ ಯಾವಗಲ, ವಿನಾಯಕ ದಡ್ಡಿಮನಿ, ಸಾಚಿ ಸಿಂಧೂರ ಪಾಲ್ಗೊಂಡಿದ್ದರು.

# ನೀರೋಕಳಿ ಆಟದ ಸಂಭ್ರಮ



**ಬನಹಟ್ಟಿ :** ಕಾರಹುಣ್ಣಿಮೆ ನಿಮಿತ್ಯ ಇಲ್ಲಿಯ ಸೋಮವಾರ ಪೇಟೆಯ ನಾಮದೇವ ಗಲ್ಲಿಯ ಮಾರುತಿ ದೇವರ ಜಾತ್ರಾ ನಿಮಿತ್ಯವಾಗಿ ನೀರೋಕಳಿ ಕಾರ್ಯಕ್ರಮವು ಸಂಭ್ರಮದಿಂದ ಜರುಗಿತು.

ನೂರಾರು ಭಕ್ತರು ಶ್ರದ್ಧಾ ಭಕ್ತಿಯಿಂದ ಹೊಂಡಕ್ಕೆ ನೀರು ತುಂಬಿದರು. ನೂರಕ್ಕೂ ಅಧಿಕ ಯುವಕರ ತಂಡ ಹೊಂಡದಲ್ಲಿನ ನೀರನ್ನು ತುಂಬಿಕೊಂಡು ಎದುರಾಳಿಗಾರರ ಕಡೆಗೆ ಬಿರುಸಾಗಿ ನೀರನ್ನು ಎರಚುತ್ತಲೇ ಇದ್ದರು.

ನಾಗಪ್ಪ ಬಕರೆ ಹೊಂಡದ ಪೂಜೆ ನೆರವೇರಿಸಿ ನೀರೋಕಳಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಈರಣ್ಣ ಹೊನವಾಡ, ಕುಮಾರ ಬಕರೆ, ಪ್ರಶಾಂತ ಕೊಳಕಿ, ಮಹಾಶಾಂತ ಶೆಟ್ಟಿ, ಗಿರೀಶ ಹಾಸೀಲಕರ, ವಾಸು ಕೋಪರ್ಡೆ, ಬಾಳು ಶ್ರೀಶೈಲ ಗಣೇಶನವರ, ರಾಮು ಕೋಪರ್ಡೆ, ಮಹಾಂತೇಶ ಜಾಲಿಕಟ್ಟಿ, ಮುಕುಂದ ಕೋಪರ್ಡೆ, ಗಂಗಪ್ಪ ಗೋಂದಕರ, ಬಾಳು ಗಣೇಶನವರ, ಮಹಾದೇವ ಭಸ್ಮೆ, ರಾಜು ಬಂಡಿಗಣಿ, ರಮೇಶ ಬೆಳ್ಳಗಿ, ಕಿರಣ ಭಸ್ಮೆ, ಆತ್ಮಾರಾಮ ಬಕರೆ, ಚಂದು ಗೋಂದಕರ, ಶ್ರೀಶೈಲ ಬಂಡಿಗಣಿ, ಮಹಾಂತೇಶ ಜಾಲಿಕಟ್ಟಿ, ಮಾನಿಂಗ ಕೋಪರ್ಡೆ, ಬಾಳಕೃಷ್ಣ ಹಾಸೀಲಕರ, ಜ್ಯೋತಿಬಾ ಕೋಪರ್ಡೆ, ಹನುಮಾನ ದೇವರ ಟ್ರಸ್ಟ್ ಕಮಿಟಿಯ ನೂರಾರು ಕಾರ್ಯಕರ್ತರು ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ದೇವರ ಹಿಪ್ಪರಗಿಯಲ್ಲಿ ನಡೆದ ಎಐಸಿಸಿ ಮಾನವ ಹಕ್ಕುಗಳ ಮಹಿಳಾ ಅಧಿವೇಶನ

**ವಿಜಯಪುರ :** ಮಹಿಳಾ ಹಕ್ಕುಗಳು ಮತ್ತು ಸಬಲೀಕರಣಕ್ಕಾಗಿ ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ತಾಲೂಕಿನಲ್ಲಿ ವಿಜಯಪುರ, ಬಾಗಲಕೋಟೆ, ಕಲಬುರಗಿ ಮತ್ತು ಬೆಳಗಾವಿ ಜಿಲ್ಲೆಗಳ ಉಸ್ತುವಾರಿ ಅಧ್ಯಕ್ಷರಾದ ಶ್ರೀ ಶಬ್ಬೀರ್ ಅಹ್ಮದ್ ಧಲಾಯತ್ ಅವರ ನಾಯಕತ್ವದಲ್ಲಿ ಎಐಸಿಸಿ ಮಾನವ ಹಕ್ಕುಗಳ ಮಹಿಳಾ ಅಧಿವೇಶನವು ಬಹಳ ಉತ್ಸಾಹದಿಂದ ನಡೆಯಿತು.

ಈ ಕಾರ್ಯಕ್ರಮದಲ್ಲಿ ದೇವರ ಹಿಪ್ಪರಗಿಯ ಕಾರ್ಯಾಧ್ಯಕ್ಷೆ ಶ್ರೀಮತಿ ಸರಸ್ವತಿ ಬಿರಾದಾರ ಅವರು ತಾಲೂಕು ಮಟ್ಟದಲ್ಲಿ ಅಧ್ಯಕ್ಷತೆ ವಹಿಸಿದ್ದರು, ಶ್ರೀಮತಿ ಕಮಲಾ ಬಾಗೇವಾಡಿ (ಉಪಾಧ್ಯಕ್ಷೆ), ಶ್ರೀಮತಿ ಸೋನಂದ ಸೋನಹಳ್ಳಿ (ಪ್ರಧಾನ ಕಾರ್ಯದರ್ಶಿ) ಮತ್ತು ಕಾರ್ಯದರ್ಶಿಗಳಾದ ಶ್ರೀಮತಿ ನಾಗಮ್ಮ ತಳಕೇರಿ ಮತ್ತು ಶ್ರೀಮತಿ ಭಾಗ್ಯಶ್ರೀ ಹದಗಲ್ ಅವರ ಪ್ರಮುಖ ಭಾಗವಹಿಸುವಿಕೆಯೊಂದಿಗೆ.

ತಮ್ಮ ಮುಖ್ಯ ಭಾಷಣವನ್ನು ನೀಡುತ್ತಾ, ಶ್ರೀ ಶಬ್ಬೀರ್ ಅಹ್ಮದ್ ಧಲಾಯತ್ ಅವರು "ಮಹಿಳೆಯರು ತಮ್ಮ ಸ್ವಂತ ಹಕ್ಕುಗಳ ರಕ್ಷಕರು ಮತ್ತು ರಕ್ಷಕರಾಗಿ ಮುಂದೆ ಬರಬೇಕು. ಎಐಸಿಸಿ ಮಾನವ ಹಕ್ಕುಗಳು ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಬಲವಾದ ತಳಮಟ್ಟದ ಬೆಂಬಲವನ್ನು ನಿರ್ಮಿಸಲು ಬದ್ಧವಾಗಿದೆ" ಎಂದು ಒತ್ತಿ ಹೇಳಿದರು.

ಶ್ರೀಮತಿ ಸರಸ್ವತಿ ಬಿರಾದಾರ ಅವರು ತಮ್ಮ ಪ್ರಭಾವಶಾಲಿ ಭಾಷಣದಲ್ಲಿ, ಅಸ್ತಿತ್ವದಲ್ಲಿರುವ ಸರ್ಕಾರಿಯೋಜನೆಗಳನ್ನುಎತ್ತಿತೋರಿಸಿದರು, ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಮಹತ್ವವನ್ನು ಹೇಳಿದರು. ಮತ್ತು ಮಹಿಳೆಯರ ಮೇಲೆ,ವಿಶೇಷವಾಗಿಗ್ರಾಮೀಣಕರ್ನಾಟಕದಲ್ಲಿ ಹೆಚ್ಚುತ್ತಿರುವ ದೌರ್ಜನ್ಯ ಘಟನೆಗಳ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿದರು.



ಈ ಕಾರ್ಯಕ್ರಮದಲ್ಲಿ ವಿಜಯ ಜಾಧವ್, ರಾಜೇಶ್ವರಿ ಮಾಗಿ, ಮೊಹಮ್ಮದ್ ಗೌಸ್ ಅಗರಖೇಡ್, ಲತೀಫ್ ಕಲಾದಗಿ, ಹನೀಫ್ ಕಲಾದಗಿ, ರಿಯಾಜ್ ಜಲಗೇರಿ, ರಶೀದ್ ಅಹ್ಮದ್ ಸಿಂದಗಿಕರ್, ನೀಲಮ್ಮ ಹಂಚಿನಾಲ್, ರಂಜಿತ್ ಜಾಧವ್,ಅಲ್ತಾಫ್ ಬೆಪಾರಿ,ಇಮ್ರಾನ್ ಮೆಂಡೆಗಾರ್ ಮತ್ತು ಮುಲ್ಲಾ ಸೇರಿದಂತೆ ಹಲವಾರು ಗಣ್ಯ ಎಐಸಿಸಿ ಮಾನವ ಹಕ್ಕುಗಳ ನಾಯಕರು ಸಕ್ರಿಯವಾಗಿ ಭಾಗವಹಿಸಿದ್ದರು.

ಅವರು ಮಹಿಳಾ ಹಕ್ಕುಗಳು ಮತ್ತು ನ್ಯಾಯದ ಉದ್ದೇಶವನ್ನು ಮತ್ತಷ್ಟು ಹೆಚ್ಚಿಸಲು ಒಗ್ಗಟ್ಟಿನ ಬೆಂಬಲವನ್ನು ಪ್ರತಿಜ್ಞೆ ಮಾಡಿದರು.

**ತೆಗೆದುಕೊಂಡ ನಿರ್ಧಾರಗಳು:**

*ತಾಲೂಕು ಮಟ್ಟದ ಮಹಿಳಾ ಹಕ್ಕುಗಳ ಕೋಶಗಳ ಸ್ಥಾಪನೆ

*ಮಾಸಿಕಕಾನೂನುಅರಿವುಮತ್ತುಸಬಲೀಕರಣ ಕಾರ್ಯಾಗಾರಗಳು

*ಗ್ರಾಮ ಮಟ್ಟದ ಮಹಿಳಾ ಸಮಿತಿಗಳ ರಚನೆ

*ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ರಾಜಕೀಯ ಪ್ರಾತಿನಿಧ್ಯವನ್ನು ಉತ್ತೇಜಿಸುವುದು.

*ಸ್ವಸಹಾಯ ಗುಂಪುಗಳು ಮತ್ತು ಜೀವನೋಪಾಯತರಬೇತಿಕಾರ್ಯಕ್ರಮಗಳಿಗೆ ಬೆಂಬಲ

# ಸಕಲ ಇಷ್ಟಾರ್ಥಗಳನ್ನು ಪೂರೈಸುವ ಪ್ರಸನ್ನ ಗಣೇಶನನ್ನು ಪೂಜಿಸಿ: ಜಿ. ಶಂಕರ



**ವಿಜಯಪುರ :** ಎಲ್ಲಾ ಕಷ್ಟ ಕಾರ್ಪಣ್ಯಗಳ ನಿವಾರಣೆಗೆ ವಿಘ್ನವಿನಾಶಕ ಗಣೇಶನ ಆಶೀರ್ವಾದ ಬೇಕು ಎಂದು ಧರ್ಮದರ್ಶಿ ಜಿ. ಶಂಕರ ಅವರು ಹೇಳಿದರು.

ನಗರದ ಗಣಪತಿ ದೇವಸ್ಥಾನ ರಜತ ಮೊಹೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾನು ಬಹಳ ಕೆಳ ಹಂತದಿಂದ ಮೇಲೆ ಬಂದಿದ್ದು, ಅದಕ್ಕೆ ಈ ವಿಘ್ನೇಶ್ವರನೆ ಕಾರಣ. ಅದೇ ರೀತಿ ಯಾವುದೇ ಕೆಲಸ ಕಾರ್ಯ ಪ್ರಾರಂಭಕ್ಕೆ ಮೊದಲ ಪೂಜಿತ ವಿಘ್ನೇಶ್ವರನ ಪೂಜೆ ಮಾಡಿ ಶುಭ ಕಾರ್ಯಗಳನ್ನು ಮಾಡುತ್ತಾ ಬಂದಿರುವ ಹಿಂದೂ ಧರ್ಮದ ಈ ಕಾರ್ಯವನ್ನು ಮುಂದೆಯೂ ಪರಿಪಾಲನೆ ಮಾಡುವಂತಾಗಬೇಕು ಎಂದರು.

ಡಿಎಸ್ಪಿ ಬಸವರಾಜ ಯಲಿಗಾರ ಮಾತನಾಡಿ, ನಮ್ಮ ಸಾಹಿತ್ಯ, ಸಂಸ್ಕೃತಿ, ನೆಲ, ಜಲ, ಭಾಷೆ, ಪೂಜೆ, ಪುನಸ್ಕಾರಗಳನ್ನು ನಮ್ಮ ಮುಂದಿನ ಪೀಳಿಗೆ ನಿರಂತರ ಕಾಪಾಡಿಕೊಂಡು ಹೋಗಬೇಕು. ದೇವರು ಇಲ್ಲದೇ ನಾವಿಲ್ಲ ಎನ್ನುವದನ್ನು ಮರೆಯಬಾರದು. ಈ ಸೇವೆಯು ನಿರಂತರವಾಗಿ ನಡೆಯುವಂತಾಗಲಿ. ನಾವು ಸಂಪಾದಿಸಿದ ಸಂಪತ್ತಿನಲ್ಲಿ ಕಡುಬಡವರು, ನಿರ್ಗತಿಕರಿಗೆ ನೀಡಿದಾಗ ಮಾತ್ರ ನಮಗೆ ಪುಣ್ಯ ಪ್ರಾಪ್ತಿ ಆಗುತ್ತದೆ.

ಅದೇ ರೀತಿ ಜಿ.ಶಂಕರ ಅವರು ಧಾರ್ಮಿಕ ಕಾರ್ಯಗಳ ಜೊತೆಗೆ, ಮಠ. ಮಂದಿರಗಳು, ವೈದ್ಯಕೀಯ ಸೇವೆಯನ್ನು ನಿರಂತರವಾಗಿ ಮಾಡುತ್ತಾ ಸಮಾಜಕ್ಕೆ ತಮ್ಮದೇ ಆದ ಕಾಣಿಕೆಯನ್ನು ನೀಡಿದ ಮಹಾನ ವ್ಯಕ್ತಿ ಎಂದು ಕೊಂಡಾಡಿದರು.

ಈ ಸಂದರ್ಭದಲ್ಲಿ ಶಾಲಿನಿ ಜಿ. ಶಂಕರ, ಸುಕನ್ಯಾ ದಯಾನಂದ, ವಿಶ್ವನಾಥ ಬಿರಾದಾರ, ಸುನೀತಾ ಬಿರಾದಾರ, ಸುರೇಶ ಕುಂಬಾರ, ಶರಣು ಸಬರದ, ಉದಯ ಉಡುಪಿ, ಅರವಿಂದ ಕುಲಕರ್ಣಿ, ವೆಂಕಣ್ಣ ಸುಲಗದ, ಸುನೀಲ ಅಂಗಡಿ, ಜ್ಞಾನೇಶ್ವರ ಕುಲಕರ್ಣಿ, ಸಿದ್ದಣ್ಣ ಸಿಂದಿಗೇರಿ, ಚಿದಾನಂದ ಕುಂಬಾರ ಹಾಗೂ ಆಡಳಿತ ಮಂಡಳಿಯ ಸದಸ್ಯರು ಪದಾಧಿಕಾರಿಗಳು ಇದ್ದರು.

# ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಕಾರ್ಯಕ್ರಮ

**ತಾಳಿಕೋಟೆ :** ತಾಲೂಕಿನ ಬಳಗಾನೂರ ಮತ್ತು ಮಿಣಜಗಿ ಗ್ರಾಮದಲ್ಲಿ ಕೃಷಿ ಇಲಾಖೆ ವಿಜಯಪುರ, ರೈತ ಸಂಪರ್ಕ ಕೇಂದ್ರ ತಾಳಿಕೋಟೆ ಹಾಗೂ ಕೃಷಿ ವಿಜ್ಞಾನ ಕೇಂದ್ರ ವಿಜಯಪುರ ಇವರ ಸಹಯೋಗದಲ್ಲಿ ವಿಕಸಿತ ಕೃಷಿ ಸಂಕಲ್ಪ ಅಭಿಯಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಬಳಗಾನೂರ ಗ್ರಾಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಪಶು ಸಂಗೋಪನೆ ವಿಷಯ ತಜ್ಞರಾದ ಶ್ರೀಮತಿ ವಿಜಯಲಕ್ಷ್ಮಿ ?ಮೇ ಮುಂದಿನಮನಿ ಅವರು ಮಾತನಾಡಿ ಬೆಸಿಗೆಯಲ್ಲಿ ಪಶುಗಳಿಗೆ ಬರತಕ್ಕಂತಹ ಕಾಲು ಬೇನೆ ಮತ್ತು ಬಾಯಿಬೇನೆ ರೋಗ, ಚಪ್ಪರೋಗ ಮತ್ತು ದನಗಳಿಗೆ ಲಸಿಕೆ ಹಾಕಿಸುವ ಬಗ್ಗೆ ಮಾಹಿತಿ ನೀಡಿದರು.




ಇನ್ನೋರ್ವ ಬೇಸಾಯ ಶಾಸ್ತ್ರ ತಜ್ಞರಾದ ಶ್ರೀಮತಿ ಶಿಲ್ಪಾ ಜೋಗಾಟಪುರ ಅವರು ಮಾತನಾಡಿ ಈ ಭಾಗದಲ್ಲಿ ತೊಗರಿ ಬೆಳೆಯು ಮುಖ್ಯವಾಗಿ ವಾಣಿಜ್ಯ ಬೆಳೆಯಾಗಿ ಮಾರ್ಪಟ್ಟಿದೆ ಈ ತೊಗರಿ ಬೆಳೆಗೆ ತಗಲುವ ಕೀಟ ರೋಗ ಭಾದೆ ಮತ್ತು ಹತೋಟೆಗೆ ಕ್ರಮಗಳಬಗ್ಗೆಮಾಹಿತಿನೀಡಿದರು. ಕೃಷಿ ಅಧಿಕಾರಿ ಮಹೇಶ ಜೋಶಿ ಅವರು ಬೀಜೋಪಚಾರ ಆಂದೋಲನದ ಮಹತ್ವ ಟ್ರೈಕೋಡರ್ಮಾ ಪೌಡರದ ಮಹತ್ವ ಕುರಿತು ರೈತರಿಗೆ ಮಾಹಿತಿ ವದಗಿಸಿದರು.

ಮಿಣಜಗಿ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಷಯ ತಜ್ಞರು ಹಾಗೂ ನಿವೇದಿ ಪಶುತಜ್ಞ ಡಾ.ಮಂಜುನಾಥ ರೆಡ್ಡಿ ಅವರು ಮಾತನಾಡಿ ನಾಯಿ ಕಡಿದಾಗ ಅದರಿಂದ ಆಗುವ ಅನಾಹುತ ಮತ್ತು ರೆಬಿಸಿ ಲಸಿಕೆ ಪಡೆದುಕೊಳ್ಳುವ ಮಾಹಿತಿ ಒದಗಿಸಿದ ಅವರು ಈ ಲಸಿಕೆ ಹಾಕಿಸಿಕೊಳ್ಳದಿದ್ದರೆ ಮೆದುಳಿನ ಮೇಲೆ ಪರಿಣಾಮ ಬೀರಿ ಮನುಷ್ಯನಿಗೆ ಹುಚ್ಚನಾಯಿ ಕಡಿತ ಸಂಬವಿಸಬಹುದು ಜಾಗೃತರಾಗಿ ಲಸಿಕೆಯನ್ನು ಹಾಕಿಸಿಕೊಳ್ಳುವದು ಮರಿಯಬಾರದೆಂದರು.

ಇನ್ನೋರ್ವ ಶ್ರೀಮತಿ ಶಿಲ್ಪಾ ಜೋಗಟಾಪೂರ ಅವರು ಹತ್ತಿ ತಳಿ, ತೊಗರಿ ತಳಿ, ಸೂಕ್ತ ಬೇಸಾಯ ಕ್ರಮಗಳ ಬಗ್ಗೆ ಮಾಹಿತಿ ಒದಗಿಸಿದರು.

ಕಾರ್ಯಕ್ರಮದಲ್ಲಿ ಕೃಷಿ ಇಲಾಖೆಯ ಆತ್ಮ ಯೋಜನೆಯ ಸಹಾಯಕ ತಾಂತ್ರಿಕ ವ್ಯವಸ್ಥಾಪಕ ಸಂಗಮೇಶ ಪಾಟೀಲ,ಸಂಜೀವಿನಿ ಸಿಬ್ಬಂದಿ ಕಿರಣಕುಮಾರ, ಅಪ್ಪು ಕುಂಟರೆಡ್ಡಿ, ಕೃಷಿ ಸಖಿಯರು ಅಲ್ಲದೇ ಮಿಣಜಗಿ ಮತ್ತು ಬಳಗಾನೂರಅಲ್ಲದೇತಾಳಿಕೋಟೆ ಪಟ್ಟಣದ ಪ್ರಗತಿಪರ ರೈತಾಪಿ ಜನರು, ಮುಖಂಡರುಗಳು ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

# ರಾಜ್ಯ ಸರ್ಕಾರದ ವೈಫಲ್ಯ ನೂರರಷ್ಟಿದೆ: ಉಮೇಶ

**ವಿಜಯಪುರ :** ಅನೇಕ ಸಾಧನೆಗಳನ್ನು ಮಾಡಿರುವ ಬಿಜೆಪಿ ಸರ್ಕಾರಕ್ಕೆ ಕಾಂಗ್ರೆಸ್ ನಾಯಕರು ಸೊನ್ನೆ ಸಾಧನೆ ಎಂದಿದ್ದಾರೆ. ರಾಜ್ಯ ಸರ್ಕಾರ ವೈಫಲ್ಯಗಳಿಗೆ ಶೇ. 100ರಷ್ಟು ನೀಡುವೆ ಎಂದು ಬಿ.ಜೆ.ಪಿ ಎಸ್ ಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ ಕಾರಜೋಳ ಹೇಳಿದ್ದಾರೆ

ಅಹಿಂದ ಹೆಸರು ಹೇಳಿಕೊಂಡು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ನಂತರ ಆ ವರ್ಗಗಳ ಕಲ್ಯಾಣಕ್ಕೆ ಇರಿಸಿದ ಎಸ್.ಸಿ.ಎಸ್. ಪಿ ಟಿಎಸ್.ಪಿ ಅನುದಾನ

ಸರಿಸುಮಾರು 36 ಸಾವಿರ ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗೆ ಡೈವರ್ಟ್ ಮಾಡಿರುವ ವೈಫಲ್ಯಕ್ಕೆ ಶೇ. 100ರಷ್ಟು ಕೊಡುವೆ ಎಂದಿದ್ದಾರೆ.



ಅತಿ ಹೆಚ್ಚು ಸಾಲ ಮಾಡಿದ ಅಪಕೀರ್ತಿ ಕಾಂಗ್ರೆಸ್ ಪಕ್ಷದ್ದಾಗಿದೆ. ನೀತಿ ಆಯೋಗದ ಸಭೆಗೆ ರಾಜಕೀಯ ಕಾರಣದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಜರಾಗದೇ ರಾಜ್ಯಕ್ಕೆ ಬರಬೇಕಾದ ಅನುದಾನ ಪಡೆಯಲು ವೈಫಲ್ಯವಾಗಿರುವಲ್ಲಿಯೂ ಕಾಂಗ್ರೆಸ್ ಸರ್ಕಾರಕ್ಕೆ ನೂರರಷ್ಟು ನೀಡುವೆ ಎಂದು ಹೇಳಿದ್ದಾರೆ.

ಕೃಷ್ಣೆಗೆ ಒಂದೇ ಒಂದು ರೂ. ಅನುದಾನ ನೀಡಿಲ್ಲ. ಈ ವೈಫಲ್ಯಕ್ಕೂ ಶೇ.100 ರಷ್ಟು, ವಾಲ್ಮೀಕಿ ನಿಗಮದ ಹಗರಣ, ಮುಡಾ ಹಗರಣ, ಸ್ಮಾರ್ಟ್ ಮೀಟರ್ ಅಳವಡಿಕೆ ಹಗರಣ ಹೀಗೆ ಹಗರಣಗಳಿಗೂ ಶೇ.100 ನೀಡುವೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾಹಿತಿ ಡಾ.ಜೆ.ಪಿ.ದೊಡಮನಿಅವರ ಅಭಿನಂದನಾ ಗ್ರಂಥ ಬಿಡುಗಡೆ

**ಅಥಣಿ:**ಪಟ್ಟಣದಖ್ಯಾತಸಾಹಿತಿ,ವಿಮರ್ಶಕ, ಪ್ರಗತಿಪರ ವಿಚಾರವಾದಿ, ಅನುವಾದಕ ಡಾ. ಜೆ. ಪಿ ದೊಡಮನಿ ಅವರ ಅಭಿನಂದನಾ ಗ್ರಂಥ ಬಿಡುಗಡೆ ಸಮಾರಂಭವನ್ನು ಬರುವ ರವಿವಾರ ದಿ.15 ರಂದು ಮುಂಜಾನೆ 9:30 ಗಂಟೆಗೆ ಮೋಟಗಿ ಮಠದ ಅನುಭವ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ಅಭಿನಂದನಾ ಸಮಿತಿಯ ಹಿರಿಯ ಸದಸ್ಯೆ, ಅಥಣಿ ಸಾಹಿತ್ಯ ಸಾಂಸ್ಕೃತಿಕ ಸಂಘದ ಅಧ್ಯಕ್ಷೆ ಡಾ. ಪ್ರಿಯಂವಧಾ ಹುಲಗಬಾಳಿ ಹೇಳಿದರು.

ಅವರು ಗುರುವಾರ ಅಥಣಿ ಪಟ್ಟಣದಲ್ಲಿ ಅಭಿನಂದನಾ ಸಮಾರಂಭದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಡಾ. ಜೆ.ಪಿ ದೊಡ್ಡಮನಿ ಅವರು ಕನ್ನಡ ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ಅಥಣಿ ಸೇರಿದಂತೆ ವಿವಿಧ ಕಾಲೇಜುಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಕಾಲೇಜು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುವುದರ ಜೊತೆಗೆ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಮರಾಠಿ ಭಾಷೆಯಲ್ಲಿರುವ ಗ್ರಂಥಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಜನಸಾಮಾನ್ಯರ ಮನೆ ಮನ ಮುಟ್ಟಿದ್ದಾರೆ. ಮಹಾತ್ಮ ಜ್ಯೋತಿಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ, ಛತ್ರಪತಿ ಶಾಹು ಮಹಾರಾಜ, ಭಾರತದ ಮೊದಲ ಶಿಕ್ಷಕಿ ಸಾವಿತ್ರಿಬಾಯಿ ಪುಲೆ, ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರ ಸಮಗ್ರ ಜೀವನ ಚರಿತ್ರೆ ಅವರ ಪ್ರಮುಖ ಅನುವಾದಿತ ಗ್ರಂಥಗಳಾಗಿವೆ. ಅವರ ಸಾಹಿತ್ಯ ಕೃಷಿಯ ಸಾಧನೆ ಕಂಡು ಕೇಂದ್ರ ಸಾಹಿತ್ಯ ಅನುವಾದ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಸಾಹಿತ್ಯ ಶ್ರೀ ಪ್ರಶಸ್ತಿ, ದಲಿತ ಸಾಹಿತ್ಯ ಪರಿಷತ್ತು, ಕೊಡ ಮಾಡುವ ರಾಷ್ಟ್ರೀಯ ಗೌರವ ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದಾರೆ. ಅಪಾರ ಶಿಷ್ಯ ಬಳಗವನ್ನು, ಸಾಹಿತ್ಯಿಕ ಬಳಗವನ್ನ ಹೊಂದಿರುವ ಅವರ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳುವುದು ನಮ್ಮೆಲ್ಲ-ರಿಗೆ ಹೆಮ್ಮೆಯ ಸಂಗತಿಯಾಗಿದೆ. ಈ ಸಮಾರಂಭದಲ್ಲಿ ಅವರ ಎಲ್ಲಾ ಅಭಿಮಾನಿ ಬಳಗದವರು, ಸಾಹಿತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕೋರಿದರು.



ಆನಂತರ ಶಿಕ್ಷಕಿ ಹಾಗೂ ಸಾಹಿತಿ ಪ್ರಭಾ ಬೋರಗಾಂವಕರ ಮಾತನಾಡಿ ಈ ಸಮಾರಂಭದ ದಿವ್ಯ ಸಾನಿಧ್ಯವನ್ನು ಚಿತ್ತರಗಿ ಹಾಗೂ ಇಳಕಲ್ ಸಂಸ್ಥಾನ ಮಠದ ಗುರು ಮಹಾಂತ ಸ್ವಾಮೀಜಿ, ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ ಸಾನಿಧ್ಯ ವಹಿಸುವರು. ಕರ್ನಾಟಕ ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ, ಹಿರಿಯ ಸಾಹಿತಿ ಡಾ. ವೀರಣ್ಣ ರಾಜೂರ ಅನುವಾದ ಜ್ಯೋತಿ ಅಭಿನಂದನಾ ಗ್ರಂಥ ಬಿಡುಗಡೆಗೊಳಿಸಲಿದ್ದಾರೆ. ನಾನು ರಚಿಸಿರುವ ಒಲವ ಉಡ-ಗೊರೆ ಎಂಬ ಭಾವಗೀತೆಗಳ ಧ್ವನಿ ಸುರಳಿಯನ್ನು ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಉಪಕುಲಪತಿ ಡಾ. ಮುರಿಗೆಪ್ಪ ಬಿಡುಗಡೆಗೊಳಿಸಲಿದ್ದಾರೆ. ಧಾರವಾಡದ ಜೆಎಸ್ ಎಸ್ ಮಹಾವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಡಾ. ಜೆ.ಎ ಹಡಗಲಿ ಅವರು ಡಾ. ದೊಡಮನಿ ಅವರ ಸಂಕೀರ್ಣ ಗ್ರಂಥಗಳನ್ನು ಬಿಡುಗಡೆಗೊಳಿಸಲಿದ್ದಾರೆ. ಖ್ಯಾತ ಸಾಹಿತಿ ಡಾ. ವಿ ಎಸ್ ಮಾಳಿ ಅವರು ದೊಡಮನಿಯವರ ಒಟ್ಟು ಸಾಹಿತ್ಯ ಅವಲೋಕನ ಕುರಿತು ಹಾಗೂ ಜಮಖ-ಂಡಿಯಪ್ರಾಧ್ಯಾಪಕ,ಹಾಸ್ಯಸಾಹಿತಿಡಾ.ವೈವ್ಹೆ ಕೊಕ್ಕನವರ ಅಭಿನಂದನಾ ಪರ ನುಡಿಗಳನ್ನು ಹೇಳಲಿದ್ದಾರೆ ಎಂದು ತಿಳಿಸಿದರು. ಚುಟುಕು ಸಾಹಿತ್ಯ ಪರಿಷತ್ತಿನ ತಾಲೂಕಾ ಅಧ್ಯಕ್ಷ ಡಾ. ಆರ್ ಎಸ್ ದೊಡ್ಡನಿಂಗಪ್ಪಗೋಳ ಸ್ವಾಗತಿಸಿ ವಂದಿಸಿದರು.

## ಬಾಲ್ಯವಿವಾಹ ಕಂಡುಬಂದರೆ ಶಿಸ್ತುಕ್ರಮ-ಎಚ್ಚರಿಕೆ

# ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಶ್ರಮಿಸಲು ಜಿಲ್ಲಾ ಪಂಚಾಯತ್ ಸಿ.ಇ.ಓ. ರಾಹುಲ್ ಶಿಂಧೆ ಸೂಚನೆ



**ಬೆಳಗಾವಿ :** ಜಿಲ್ಲೆಯನ್ನು ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಎಲ್ಲ ಇಲಾಖೆಗಳು ಸಮನ್ವಯದೊಂದಿಗೆ ಕಾರ್ಯನಿರ್ವಹಿಸಬೇಕು. ಬಾಲ್ಯವಿವಾಹ ತಡೆಗಟ್ಟುವಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜವಾಬ್ದಾರಿ ಅತೀ ಮಹತ್ವದಾಗಿದೆ ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಗುರುವಾರ (ಜೂ.12) ಜರುಗಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಾಲ್ಯ ವಿವಾಹ ತಡೆಗಟ್ಟಲು ಸಂಬಂಧಿಸಿದ ಇಲಾಖೆಗಳು ತಮ್ಮ ಜವಾಬ್ದಾರಿಗಳನ್ನು ಅರಿತು ಕಾರ್ಯ ಪ್ರವೃತ್ತರಾಗಬೇಕು. ಜಿಲ್ಲೆಯಲ್ಲಿ ಬಾಲ್ಯವಿವಾಹ ಜರುಗಿರುವ ಪ್ರಕರಣಗಳು ಕಂಡುಬಂದಲ್ಲಿ ಸಂಬಂಧಿಸಿದವರ ಮೇಲೆ ಶಿಸ್ತು ಕ್ರಮವಹಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಗಂಭಿರವಾಗಿ ಪರಿಗಣಿಸಬೇಕು.

ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ಪ್ರಕರಣಗಳು ಕಂಡುಬಂದಲ್ಲಿ ಇದಕ್ಕೆ ಕಾರಣಗಳನ್ನು ಹುಡುಕಿ ಅನೈತಿಕ ಸಾಗಾಣಿಕೆ ಕಡಿವಾಣಕ್ಕೆ ಅಧಿಕಾ-ರಿ,ಸಿಬ್ಬಂದಿಗಳು ಮುಂದಾಗಬೇಕು. ಈ ಕಾರ್ಯದಲ್ಲಿ ಸಂಬಂಧಿಸಿದ ಇಲಾಖೆಗಳು ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು ಎಂದರು.

ಸ್ವಾಧಾರ ಗೃಹಗಳಲ್ಲಿ ದಾಖಲಾಗಿರುವ ನಿವಾಸಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ ಪುನರ್ವಸತಿ ನೀಡುವ ಕಾರ್ಯವಾಗಬೇಕು. ಈ ಕುರಿತು ಸಂಬಂಧಿಸಿದ ಅಧಿಕಾರಿಗಳು ಪರಿಶೀಲಿಸಿ ವರದಿ ನೀಡಲು ಸೂಚಿಸಿದರು.

ಚಿಕ್ಕೋಡಿಯಲ್ಲಿ ಪ್ರಾರಂಭಾವಗಿರುವ ಸಖಿ ಒನ್ ಘಟಕದಲ್ಲಿ ಪ್ರಕರಣಗಳ ಸಂಖ್ಯೆ ತುಂಬಾ ಕಡಿಮೆಯಾಗಿದ್ದು, ಸಖಿ ಒನ್ ಘಟಕ ಪ್ರಾರಂಭವಾಗಿರುವ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳುವದರ ಮೂಲಕ ಜಾಗೃತಿ ಮೂಡಿಸಲು ತಿಳಿಸಿದರು.

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳ ಕುರಿತು ಪ್ರಚಾರ ಕೈಗೊಳ್ಳಬೇಕು. ಸ್ತ್ರೀ ಶಕ್ತಿ ಗುಂಪುಗಳಿಗಾಗಿ ಸವಿರುಚಿ ಕ್ಯಾಂಟಿನ್ ಪ್ರಾರಂಭಕ್ಕಾಗಿ ಒದಗಿಸಲಾದ ವಾಹನಗಳ ಮಾಹಿತಿ ಪಡೆದು ಅವರು ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕಳ ತಡೆಗಟ್ಟುವಿಕೆ ಕುರಿತು ಆಂತರಿಕ ದೂರು ನಿವಾರಣ ಸಮಿತಿಗಳು ರಚನೆಯಾಗುವುದರ ಕುರಿತು ಪರಿಶೀಲಿಸಬೇಕು. ಎಲ್ಲ ಇಲಾಖೆಗಳಲ್ಲಿ ಸಮಿತಿ ರಚನೆಯಾಗಿರುವುದರ ಕು-ರಿತು ಹದಿನೈದು ದಿನದೊಳಗಾಗಿ ವರದಿ ನೀಡಲು ಸೂಚಿಸಿದರು.

ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳನ್ನು ಪಿ.ಎಮ್.ಜೆ.ಜೆ.ಬಿ.ವಾಯ್ ಹಾಗೂ ಪಿ.ಎಮ್. ಎಸ್.ಪಿ.ವಾಯ್ ಯೋಜನೆಗಳ ಸೌಲಭ್ಯದ ಸದುಪಯೋಗ ಪಡೆದುಕೊಳ್ಳುವಂತೆ ಕ್ರಮ ವಹಿಸಲು ಸೂಚಿಸಿದರು.

ಜಿಲ್ಲೆಯಲ್ಲಿ ಬಾಲ ಆಧಾರ ನೊಂದಣಿ ಕಾರ್ಯ ಕುಂಠಿತವಾಗಿದ್ದು, ಅಂಗನವಾಡಿ ಕೇಂದ್ರದಲ್ಲಿನ ಮಕ್ಕಳ ಬಾಲ ಆಧಾರ ಮಾಡಿಸಲು ರೂಪರೇಷೆಗಳನ್ನು ಸಿದ್ಧಪಡಿಸಿ ಅಭಿಯಾನದ ರೂಪದಲ್ಲಿ ಬಾಲ ಆಧಾರ ನೊಂದಣಿ ಕಾರ್ಯಕ್ಕೆ ಕ್ರಮಕೈಗೊಳ್ಳುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಅವರು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಆರ್.ನಾಗರಾಜ್ ಅವರು ಇಲಾಖೆಯ ವಿವಿಧ ಯೋಜನೆಗಳ ಮಾಹಿತಿ ನೀಡಿದರು.

ಸಭೆಯಲ್ಲಿ ಹೆಚ್ಚುವರಿ ಪೋಲಿಸ್ ವರಿಷ್ಠಾಧಿಕಾರಿ ಶ್ರುತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಈಶ್ವರ ಗಡಾದಿ,

ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ರವಿ ಬಂಗಾರೆಪ್ಪನವರ, ಮಹಿಳಾ ಅಭಿವೃದ್ಧಿ ಅಧಿಕಾರಿ ಅರ್ಚನಾ ಮತ್ತು ವಿವಿಧ ಇಲಾಖೆ ಅಧಿಕಾರಿಗಳು, ತಾಲೂಕು ಶಿಶು ಅಭಿವೃದ್ಧಿ ಯೊಜನಾಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# "ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ" ಸಮಿತಿ ಸಭೆ

## ಶುದ್ಧ ಕುಡಿಯುವ ನೀರು ಪೂರೈಕೆಗೆ ಕ್ರಮ ವಹಿಸಿ: ಜಿ.ಪಂ ಸಿಇಓ ರಾಹುಲ್ ಶಿಂಧೆ

**ಬೆಳಗಾವಿ:**ಮಳೆಗಾಲದಲ್ಲಿಶುದ್ಧಕುಡಿಯುವ ನೀರು ಪೂರೈಕೆ ಕೊರತೆಯಾಗಬಾರದು. ಗ್ರಾಮ ಪಂಚಾಯತಿಗಳಲ್ಲಿ ಅಗತ್ಯವಿದ್ದಲ್ಲಿ ಕಡ್ಡಾಯವಾಗಿ ನೀರಿನ ಗುಣಮಟ್ಟದ ಪರೀಕ್ಷೆಗೊಳಪಡಿಸಬೇಕು. ಒಂದು ವೇಳೆ ಕಲುಷಿತ ನೀರಿನಿಂದ ಸಾರ್ವಜನಿಕ-ರಿಗೆ ಆರೋಗ್ಯ ಸಮಸ್ಯೆಗಳು ಎದುರಾದಲ್ಲಿ ನೇರವಾಗಿ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕಾಧಿಕಾರಿ ರಾಹುಲ್ ಶಿಂಧೆ ಎಚ್ಚರಿಕೆ ನೀಡಿದರು.

ಜಿಲ್ಲಾ ಪಂಚಾಯತ್ ವಿಡಿಯೋ ಸಂವಾದ ಸಭಾಂಗಣದಲ್ಲಿ ಗುರುವಾರ (ಜೂ.12) ನಡೆದ ವಿವಿಧ ತಾಲ್ಲೂಕುಗಳ ಕುಡಿಯುವ ನೀರು ಪೂರೈಕೆ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿನ ಮೇಲ್ಮಟ್ಟದನೀರುಸಂಗ್ರಹಣಾಘಟಕಗಳನ್ನು ಮಾರ್ಗಸೂಚಿಗಳನ್ವಯ ಸ್ವಚ್ಚತೆ ಹಾಗೂ ಸುರಕ್ಷತೆಗೆ ಕ್ರಮ ವಹಿಸಬೇಕು. ಮಳೆಗಾಲದ ಸಮಯದಲ್ಲಿ ಪ್ರತಿ ಗ್ರಾಮಗಳಲ್ಲಿ ಎಫ್. ಹೆಚ್.ಟಿ.ಸಿ ಮೂಲಕ ಕುಡಿಯುವ ನೀರನ್ನು ಪರೀಕ್ಷಿಸಿ ನಂತರ ಪೂರೈಕೆಗೆ ಕ್ರಮ ವಹಿಸಬೇಕು.



ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಗಮನ ಹರಿಸಬೇಕು. ಆಯಾ ತಾಲೂಕು ಪಂಚಾಯತ ಮತ್ತು ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿನ ಶುದ್ದ ಕುಡಿಯುವ ನೀರಿನ ಘಟಕಗಳು ಕಾರ್ಯನಿರ್ವಹಿಸುತ್ತಿರುವ ಕುರಿತು ವರದಿ ನೀಡಬೇಕು.

ನೀರು ಶುದ್ಧೀಕರಣ ಘಟಕಗಳನ್ನು ನಿರಂತರ ನಿರ್ವಹಣೆ ಮಾಡಬೇಕು. ಕೆಲವು ಗ್ರಾಮಗಳಲ್ಲಿ ನೀರು ಶುದ್ಧೀಕರಣ ಘಟಕಗಳು ಗ್ರಾಮದಿಂದ ಸ್ವಲ್ಪ ದೂರದಲ್ಲಿದ್ದು ಅಂತಹ ಶುದ್ಧೀಕರಣ ಘಟಕಗಳನ್ನು ಪಟ್ಟಿ ಮಾಡಿ ಸಮಿತಿಗೆ ಸಲ್ಲಿಸಬೇಕು ಎಂದು ಸೂಚಿಸಿದರು.

ಮಳೆಗಾಲ ಪ್ರಾರಂಭವಾಗಿರುವದರಿಂದ ಕಡ್ಡಾಯವಾಗಿ ಪ್ರತಿ 15 ದಿನಗಳಿಗೆ ಒಂದು ಬಾರಿ ಕುಡಿಯುವ ನೀರು ಸಮಸ್ಯೆಗಳ ಕು-ರಿತು ಸಭೆ ಆಯೋಜಿಸಬೇಕು. ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯಡಿ ನೀರು ಸರಬರಾಜು ಪ್ರಗತಿಗೆ ಅಗತ್ಯದ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಅವರು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ರವಿ ಬಂಗಾರೆಪ್ಪನವರ, ಬೆಳಗಾವಿ ಹಾಗೂ ಚಿಕ್ಕೋಡಿ ವಿಭಾಗದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಅಧಿಕಾ-ರಿಗಳು ಉಪಸ್ಥಿತರಿದ್ದರು.

## ನಿಗದಿತ ಅವಧಿಗಿಂತ ಮೊದಲೇ ಸುರಿಯುತ್ತಿರುವ ಮಳೆಯಿಂದ ಜನಜೀವನ ಅಸ್ತವ್ಯಸ್ತ !

# ಮುಂಗಾರು ಪೂರ್ವ ಮಳೆ ತಾಲೂಕಿನಲ್ಲಿ ಬಿತ್ತನೆ ಚುರುಕು

**ವರದಿ: ಮಲ್ಲೇಶ ಆಳಗಿ.**

**ಜಮಖಂಡಿ :** ಮಳೆಯಿಂದ ಒಂದೆಡೆ ಆತಂಕ ಸೃಷ್ಠಿಯಾದರೇ, ಮತ್ತೊಂಡೆಗೆ ಸಂಭ್ರಮದ ವಾತಾವರಣ. ಇದು ತಾಲೂಕಿನ ಜನತೆ ಅನುಭವಿಸುತ್ತಿರುವ ಪ್ರಸಕ್ತ ಸನ್ನಿವೇಷ. ನಗರ ಪ್ರದೇಶದಲ್ಲಿವಾಡಿಕೆಗೆಮುಂಚೆಸುರಿಯುತ್ತಿರುವ ಮಳೆಯಿಂದ ವ್ಯಾಪಾರ ಇಳಿಮುಖವಾಗುವ ಮೂಲಕ ಸಾಂಕ್ರಾಮಿಕ ರೋಗಗಳಿಂದ ಜನ ಜಾನುವಾರು ತೊಂದರೆ ಅನುಭವಿಸುತ್ತಿದ್ದಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಸು-ರಿಯುತ್ತಿರುವ ಮಳೆಯಿಂದ ರೈತಾಪಿ ವರ್ಗ ಸಂಭ್ರಮದಿಂದ ತಮ್ಮ ಜಮೀನುಗಳಲ್ಲಿ ಬಿತ್ತನೆ ಕೆಲಸ ಚುರುಕುಗೊಳಿಸಿರುವ ಹಿನ್ನೆಲೆಯಲ್ಲಿ ಸಂತಸ ವ್ಯಕ್ತಪಡಿಸುತ್ತಿದ್ದಾರೆ.





ಮಳೆಗಾಲ ಪ್ರಾರಂಭವಾಗಿದ್ದು ತಾಲೂಕಿನಾದ್ಯಂತ ಕೃಷಿ ಚಟುವಟಿಕೆಗಳು ಭರದಿಂದ ಸಾಗಿವೆ. ರೈತರು ಮುಂಗಾರು ಬೆಳೆಗಳ ಬಿತ್ತನೆಗೆ ಸಿದ್ಧತೆ ಮಾಡಿಕೊಂಡಿದ್ದು, ನೀರಾವರಿ ಸೌಲಭ್ಯವಿರುವ ನದಿ ತೀರದ ಗ್ರಾಮಗಳಲ್ಲಿ ವಾಣಿಜ್ಯ ಬೆಳೆ ಕಬ್ಬಿನ ನಾಟಿ ಜೋರಾಗಿ ನಡೆದಿದೆ.

ವಾಡಿಕೆಗಿಂತ ಮೊದಲೇ ಮಳೆ ಪ್ರಾರಂಭವಾಗಿದ್ದರಿಂದ ತಾಲೂಕಿನ ಕೆಲವು ಕಡೆಗಳಲ್ಲಿ ಬೆಳೆಯಲಾಗಿದ್ದ ಬೇಸಿಗೆ ಮೆಕ್ಕೆ ಜೋಳ ಮಳೆಯಲ್ಲಿ ಸಿಲುಕಿ ತೊಂದರೆ ಅನುಭವಿಸಿದ ಘಟನೆಗಳು ನಡೆದಿವೆ.

ದ್ರಾಕ್ಷಿ ಸಹಿತ ವಿವಿಧ ಹಣ್ಣಿನ ಬೆಳೆಗಳು ಮತ್ತು ತರಕಾರಿಗಳು, ಈರುಳ್ಳಿ, ಮಾವು ಬೆಳೆದ ರೈತರು ಮುಂಗಾರು ಪೂರ್ವ ಮಳೆಯಿಂದ ಹಾನಿ ಅನುಭವಿಸಿದ್ದಾರೆ. ಮಾವಿನ ಬೆಲೆ ತೀವ್ರವಾಗಿ ಕುಸಿದಿದ್ದು ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಬ್ಬು ಬೆಳೆಗಾರರಿಗೆ ಮುಂಗಾರು ಪೂರ್ವ ಮಳೆ ವರದಾನದಂತೆ ಕೆಲಸ ಮಾಡಿದೆ. ನದಿಯಲ್ಲಿ ನೀರು ಬತ್ತಿ ಹೋಗುತ್ತಿತ್ತು. ಕೊಳವೆ ಭಾವಿಗಳ ನೀರು ಕಡಿಮೆಯಾಗಿ ಕಬ್ಬಿನ ಬೆಳೆ ಉಳಿಸಿಕೊಳ್ಳುವದು ಕಷ್ಟದ ಮಾತಾಗಿತ್ತು. ವಾಡಿಕೆಗೆ ಪೂರ್ವದಲ್ಲಿ ಮಳೆಯಾಗಿದ್ದ-ರಿಂದ ನದಿಯಲ್ಲಿ ನೀರು ಬಂದಿದ್ದು, ಕೊಳವೆ ಬಾವಿಗಳು ರಿಚಾರ್ಜ ಆಗಿ ಒಣಗುತ್ತಿದ್ದ ಕಬ್ಬಿಗೆ ಜೀವ ಜಲ ಲಭಿಸಿದೆ.

ಮುಂಗಾರು ಮಳೆ ಪ್ರಾರಂಭವಾಗಿದ್ದು ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಒಣ ಬೇಸಾಯವಿರುವ ರೈತರು ತೊಗರಿ, ಜೋಳ, ಕಡಲೆ, ಶೇಂಗಾ, ಉದ್ದು, ಅಲಸಂದಿ, ಹೆಸರು ಮುಂತಾದ ಬೆಳೆಗಳ ಬಿತ್ತನೆಗೆ ತಯಾರಿ ನಡೆಸಿದ್ದಾರೆ. ನೀರಾವರಿ ಅನುಕೂಲವಿರುವ ರೈತರು ಕಬ್ಬು ನಾಟಿ ಮಾಡುತ್ತಿದ್ದು ಕೃಷಿ ಚಟುವಟಿಕೆಗಳು ಭರದಿಂದ ನಡೆಯುತ್ತಿವೆ. ಕೃಷಿ ಉಪಕರಣಗಳ ಸದ್ದು ಜೋರಾಗಿ ಕೇಳಿ ಬರುತ್ತಿದ್ದು, ಎತ್ತುಗಳು, ಕಾರ್ಮಿಕರ, ಟ್ರ್ಯಾಕ್ಟರಗಳ ಭರಾಟೆ ಆರಂಭಗೊಂಡಿದೆ.

**ಸುರಿಯುತ್ತಿರುವ ಮಳೆ:**

ನಿಗದಿತ ಅವಧಿಗಿಂತ ಮೊದಲೇ ಸು-ರಿಯುತ್ತಿರುವ ಮಳೆಯಿಂದ ಬೇಸಿಗೆ ತಿಂಗಳಾದ ಮೇ ಮತ್ತು ಜೂನ ತಿಂಗಳಲ್ಲಿ ತಾಲೂಕಿನಲ್ಲಿ ಯಾವುದೇ ರೀತಿಯಲ್ಲಿ ನೀರಿನ ಹಾಹಾಕಾರ ಉಂಟಾಗಿಲ್ಲ. ಕಳೆದ ಇಪ್ಪತ್ತು ದಿನಗಳ ಹಿಂದೆಯೇಆರಂಭಗೊಂಡಿರುವಮಳೆಯಿಂದ ಜನಜೀವನಅಸ್ತವ್ಯಸ್ತಗೊಂಡಿದ್ದು,ಸಾಂಕ್ರಾಮಿಕ ರೋಗಗಳು ಹರಡುತ್ತಿದ್ದು, ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ತಾಲೂಕಿನಲ್ಲಿ ದಾಖಲೆ ಪ್ರಮಾಣದಲ್ಲಿ ವಾಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗುತ್ತಿದೆ. ಸಂತೆ ದಿನವಾದ ಗುರುವಾರ ಕೂಡ ಸುರಿದ ಮಳೆಯಿಂದ ವ್ಯಾಪಾರ, ವಹಿವಾಟು ಸ್ಥಗಿ-ತಗೊಂಡಿದೆ.

# ಬಳ್ಳಾರಿ ಎಂ.ಪಿ ಎಂ.ಎಲ್.ಎ. ಮನೆಗಳ ಮೇಲೆ ಇ.ಡಿ ದಾಳಿ ಬಿಜೆಪಿ ಷಡ್ಯಂತರ: ರಾಜ್ಯಸಭಾ ಸದಸ್ಯ ನಾಸಿರ್ ಹುಸೇನ್

**ಬಳ್ಳಾರಿ :** ವಿರೋಧ ಪಕ್ಷದ ನಾಯಕರು ಮತ್ತು ಕಾಂಗ್ರೆಸ್ ಎಂ.ಪಿ ಎಂ ಎಲ್ ಎ ಮನೆಗಳ ಮೇಲೆ ಪದೇ ಪದೇ ರಾಜ್ಯ ಮತ್ತು ಇಡೀ ರಾಷ್ಟ್ರದಾದ್ಯಂತ ಬಿಜೆಪಿ ಪ್ರಾಯೋಜಿತ ಈ.ಡಿ ದಾಳಿ ನಡೆಯುತ್ತಿದೆ, ಇದು ವಿರೋಧ ಪಕ್ಷಗಳನ್ನು ಕುಗ್ಗಿಸುವ ಭಾರತೀಯ ಜನತಾ ಪಕ್ಷದ ಷಡ್ಯಂತರ ಮತ್ತು ಕುತಂತ್ರವಾಗಿದೆ ಎಂದು ರಾಜ್ಯಸಭಾ ಸದಸ್ಯ ಸೈಯದ್ ನಾಸಿರ್ ಹುಸೇನ್ ಆರೋಪಿಸಿದರು.

ಅವರು ಇಂದು ನಗರದ ರಾಯಲ್ ಫೋರ್ಟ್ ಹೋಟೆಲ್ ನಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಿ ಮಾತನಾಡಿ,

ನಗರ ಶಾಸಕ ಭರತ್ ರೆಡ್ಡಿ, ಕಂಪ್ಲಿ ಶಾಸಕ ಗಣೇಶ್, ಕೂಡ್ಲಿಗಿ ಶಾಸಕ ಡಾಕ್ಟರ್‌ಶ್ರೀನಿವಾಸ್‌ಮತ್ತುಅತ್ಯಂತ ಮುಖ್ಯವಾಗಿ ಬಳ್ಳಾರಿ ಸಂಸದ ಈ ತುಕಾರಾಂ ಅವರ ಮನೆ ಮೇಲೆ ದಾಳಿ ನಡೆಸಿರುವುದು ಬಿಜೆಪಿಯ ಕುತಂತ್ರ ಮತ್ತು ದುರುದ್ದೇಶದಿಂದ ಕೂಡಿದೆ, ಈ ಮೇಲ್ಕಂಡ ಎಲ್ಲಾ ಶಾಸಕರು ರಾಜಕೀಯ ಮತ್ತು ವ್ಯವಹಾರಗಳಲ್ಲಿ ಶುದ್ಧ ಹಕ್ಕರಾಗಿದ್ದಾರೆ, ಇವರಿಂದ ಒಂದು ಪೇಪರ್ ಅಥವಾ ನಯಾ ಪೈಸೆಯನ್ನು ಸಹ ವಶಪಡಿಸಿಕೊಳ್ಳಲಾಗದೆ ಬಂದ ದಾರಿಗೆಸುಂಕವಿಲ್ಲಎಂಬಂತೆ ಇ.ಡಿ ಬರಿಗೈಯಲ್ಲಿ ವಾಪಸ್ ಹೋಗಿದೆ, ಲೋಕಸಭಾ ಚುನಾವಣೆಯಲ್ಲಿ ಎಸ್ ಟಿ ನಿಗಮದ ಹಣವನ್ನು ಬಳಸಲಾಗಿದೆ ಎಂದು ಸುಖ ಸುಮ್ಮನೆ ವಿರೋಧ ಪಕ್ಷಗಳು ಆರೋಪವನ್ನು ಮಾಡುತ್ತಿವೆ, ಆದರೆ ಎಸ್ಟಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಹಣ ಈಗಾಗಲೇ ಶೇಕಡ 95 ರಷ್ಟು ವಾಪಸ್ ಆಗಿದೆ, ಇನ್ನು ಹೇಗೆ ಆ ಹಣವನ್ನು ಎಂಪಿ ಚುನಾವಣೆಯಲ್ಲಿ ಬಳಸಲು ಸಾಧ್ಯ ಎಂದು ಪ್ರಶ್ನಿಸಿದರು.



ಬಿಜೆಪಿ ಆಡಳಿತದಿಂದ ಇಲ್ಲಿಯವರೆಗೆ ಈಡಿ ದಾಳಿ ನಡೆಸಿರುವುದು ಶೇಕಡ 98 ರಷ್ಟು ವಿರೋಧ ಪಕ್ಷಗಳ ಎಂಪಿ ಎಮ್‌ಎಲ್‌ಎಗಳಮನೆಗಳಮೇಲೆ ಕೇವಲ ಎರಡು ಪರ್ಸೆಂಟ್ ಮಾತ್ರ ಬಿಜೆಪಿಯ ನಾಯಕರ ಅಥವಾ ಬಿಜೆಪಿ ವಿರೋಧಿ ನಾಯಕರ ಮೇಲೆ ದಾಳಿಯಾಗಿದೆ. ಇದನ್ನು ಗಮನಿಸಿದಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದೇಶದಲ್ಲಿ ವಿರೋಧ ಪಕ್ಷವೇ ಇರಬಾರದು ಎಂಬಂತೆ ವರ್ತಿಸುತ್ತದೆ, ಇಡಿ ಮತ್ತು ಸಿ ಬಿ ಐ ಯನ್ನು ಬಳಸಿಕೊಂಡು ರಾಷ್ಟ್ರದಲ್ಲಿ ಇತರೆ ಪಕ್ಷಗಳ ಆಡಳಿತವನ್ನು ಹೈಜಾಕ್ ಮಾಡಿಆರಾಜ್ಯದಲ್ಲಿಹಿಂಭಾಗಲಿನ ಮೂಲಕ ಆಡಳಿತವನ್ನು ಹಿಡಿಯಲು ಬಿಜೆಪಿ ಸರ್ಕಾರ ಸಂಚುರೂಪಿಸುತ್ತದೆ, ಇದು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ ಎಂದು ಬಿಜೆಪಿ ನಡೆಯನ್ನು ಖಂಡಿಸಿದರು.

ಗ್ರಾಮಾಂತರ ಶಾಸಕ ಬಿ ನಾಗೇಂದ್ರ ಅವರಿಗೆ ಸಚಿವ ಸ್ಥಾನ ಸಿಗಬೇಕೆಂಬುದು ನಮ್ಮೆಲ್ಲರ ಆಶಯವಾಗಿದೆ ಆದರೆ ಹೈಕಮಾಂಡ್ ಯಾವಾಗ ಸಿಗ್ನಲ್ ಕೊಡುತ್ತೋ ಆಗ ನಾಗೇಂದ್ರ ಸಚಿವರಾಗುತ್ತಾರೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಈ ಪತ್ರಿಕಾಗೋಷ್ಠಿಯಲ್ಲಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಲ್ಲಮಪ್ರಶಾಂತ್, ಲಿಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ್,

ಕೇಂದ್ರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ಎ ಮಾನಯ್ಯ, ಮೇಯರ್ ಮುಲ್ಲಂಗಿ ನಂದಿಶ್, ಎಪಿಎಂಸಿ ಅಧ್ಯಕ್ಷ ನಾಗೇಂದ್ರ, ಬಗರ್ ಹುಕುಮ್ ಅಧ್ಯಕ್ಷ ತಿಮ್ಮನಗೌಡ, ಗ್ಯಾರಂಟಿ ಯೋಜನೆಯ ಅನುಷ್ಠಾನದ ಅಧ್ಯಕ್ಷ ಕೆ ಚಿದಾನಂದಪ್ಪ,

ಬಿ ರಾಂಪ್ರಸಾದ್, ವಿ. ಕೆ. ಬಸಪ್ಪ, ಕಲ್ಕಂಬ ಪಂಪಾಪತಿ, ವೆಂಕಟೇಶ್ ಹೆಗಡೆ, ಸೇರಿದಂತೆ ಅನೇಕ ಕಾಂಗ್ರೆಸ್ ಮುಖಂಡರು ಮಹಾನಗರ ಪಾಲಿಕೆ ಸದಸ್ಯರುಗಳು ಇದ್ದರು.

# ಗೆಳೆಯಾ... ಓ... ಗೆಳೆಯಾ... ಅಲ್ಬಮ್ ಬಿಡುಗಡೆ ಬೆಲೆ ಕಟ್ಟಲಾಗದ ಬಂಧನವೇ ಸ್ನೇಹಬಂಧನ



**ಜಮಖಂಡಿ :** ಬೆಲೆ ಕಟ್ಟಲಾಗದ ಶ್ರೇಷ್ಠ ಬಂಧನವೇ ಸ್ನೇಹಬಂಧನ. ಸ್ನೇಹ ಎನ್ನುವುದು ನೆನಪಲ್ಲ ಅದೊಂದು ವಿಶಿಷ್ಟ ಕನಸಿನಲೋಕ. ಅದು ನಮ್ಮ ಜೊತೆ ಸದಾಕಾಲ ಇರುವ ಇನ್ನೊಂದು ಮನಸ್ಸು. ಸ್ನೇಹದ ಗಾಯನ ಸದಾಕಾಲ ಹಸಿರಾಗಿ ಇರಲೆಂದು ನಿವೃತ್ತ ಸಹಾಯಕ ಪ್ರಧಾನ ವ್ಯವಸ್ಥಾಪಕ ಸುರೇಶ ಸಿಂಗಾಡಿ ಹೇಳಿದರು.

ನಗರದ ಡಾಲರ್ಸ ಕಾಲೋನಿಯಲ್ಲಿ ಹೊಸಟ್ಟಿ ಕಲ್ಪವೃಕ್ಷ ಆವರಣದಲ್ಲಿ ಹಮ್ಮಿಕೊಂಡಿದ್ದ "ಗೆಳೆಯಾ.. ಓ.. ಗೆಳೆಯಾ.." ಅಲ್ಬಮ್ ಹಾಡಿನ ವಿಡಿಯೋ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅನೀಲ ಮುರಗೋಡ ಮಾತನಾಡಿ, ನಾಲ್ವತ್ತು ವರ್ಷಗಳ ಕುಚುಕು ಗೆಳೆತನದ ಸಂಭ್ರಮಾಚರಣೆಯ ಸವಿ ನೆನಪಿಗಾಗಿ ಬಾಲ್ಯದ ಬಳಗದ ಸ್ನೇಹಿತರು ಗೋಕರ್ಣ, ಹೊನ್ನಾವರ ಸಹಿತ ವಿವಿಧ ಸ್ಥಳಗಳಲ್ಲಿ ಚಿತ್ರೀಕರಣ ಮಾಡಿರುವ ಗೆಳೆಯಾ ಓ ಗೆಳೆಯಾ ವಿಡಿಯೋ ಹಾಡಿಗೆ ನಮ್ಮ ಸ್ನೇಹಿತರು ಸೋಮು ಸಿಂಧೂರ, ಸುರೇಶ ಮಾಳಿ ಸಹಿತ ಹಲವರು ಅಭಿನಯಿಸಿದ್ದು ಅಲ್ಬಮ್ ಹಾಡಿನ ವಿಶೇಷತೆ. ಪ್ರತಿಯೊಬ್ಬರ ಗೆಳೆತನವನ್ನು ನೆನಪಿಸುವಂತಹ ಹಾಡು ಇದಾಗಿದೆ ಎಂದರು.

ಎಡಿಟಿಂಗ್ ಮತ್ತು ನಿರ್ದೇಶನ ಅರುಣ ಬಸರಗಿ, ಸಂಗೀತ ನಿರ್ದೇಶನ ಮತ್ತು ಗಾಯನ ಮಂಜುನಾಥ ಹೊಸವಾಳ ಹಾಗೂ ಬಿ.ಎಲ್.ಡಿ.ಇ. ಸಂಸ್ಥೆ ಕಾನೂನು ಉಪನ್ಯಾಸಕ ರಾಜಶೇಖರ ಹೊಸಟ್ಟಿ ಸಾಹಿತ್ಯ ನೀಡಿದ್ದಾರೆ.

ಮಂಜುನಾಥ ಹೊಸವಾಳ ಯೂ ಟ್ಯೂಬನಲ್ಲಿ ಅಲ್ಬಮ್ ಬಿಡುಗಡೆಗೊಳ್ಳಲಿದೆ.

ಇದೇ ಸಂದರ್ಭದಲ್ಲಿ ರಾಘವೇಂದ್ರ ಜೋಶಿ, ವಿಲಾಸ ಕೊಡಗಲಿ, ಮನಿಷ ಭುತಡಾ, ಸುನೀಲ ಮುರಗೋಡ, ಕುಮಾರ ಸಾಲಿಮಠ, ಮಹಾದೇವ ಅಳ್ಳಿಮಟ್ಟಿ ಸಹಿತ ಇನ್ನೂ ಹಲವರು ಪಾಲ್ಗೊಂಡಿದ್ದರು.

# ಬೋಧನಾ ಪರಿಣಿತ ಪ್ರಶಸ್ತಿ ಪ್ರದಾನ ಸಮಾರಂಭ

**ಜಮಖಂಡಿ :** 2024-25 ನೇ ಸಾಲಿನಲ್ಲಿ ಜರುಗಿದ ವಾರ್ಷಿಕ ಪರೀಕ್ಷೆಗಳಲ್ಲಿ ಕನ್ನಡ ವಿಷಯಕ್ಕೆ ಪ್ರತಿಶತ 100 ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ ಕನ್ನಡ ವಿಷಯದ ಉಪನ್ಯಾಸಕರು ಹಾಗೂ ಸಹ ಶಿಕ್ಷಕರ ಸನ್ಮಾನ, ಬೋಧನಾ ಪರಿಣಿತ ಪ್ರಶಸ್ತಿ ಪ್ರದಾನ ಹಾಗೂ ವಿಶೇಷ ಉಪನ್ಯಾಸ ಸಮಾರಂಭವನ್ನು ಭಾನುವಾರ ಜೂ. 15 ರಂದು ಬೆಳಿಗ್ಗೆ 9-30 ಗಂಟೆಗೆ ಜ್ಞಾನ ಗಂಗೋತ್ರಿ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ನಿವೃತ್ತ ಪ್ರಾಚಾರ್ಯ ಡಾ. ಸಂಗಮೇಶ ಮಟೋಳಿ ತಿಳಿಸಿದ್ದಾರೆ.

ಶ್ರೀ ವೀರೇಶ್ವರ ಪ್ರಕಾಶನ ಜಮಖಂಡಿ, ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕ ಜಮಖಂಡಿ, ಸಾಹಿತ್ಯ ಸೌರಭ ವೇದಿಕೆ ಜಮಖಂಡಿ ಇವುಗಳ ಆಶ್ರಯದಲ್ಲಿ ಜರುಗಲಿದೆ. ಜಮಖಂಡಿ ಮತ್ತು ರಬಕವಿ-ಬನಹಟ್ಟಿ ತಾಲ್ಲೂಕುಗಳ ಪದವಿ ಪೂರ್ವ ಕಾಲೇಜುಗಳ, ಪ್ರೌಢ ಶಾಲೆಗಳ ಸುಮಾರು ಒಂದು ನೂರಕ್ಕೂ ಹೆಚ್ಚು ಜನ ಕನ್ನಡ ಉಪನ್ಯಾಸಕರು, ಕನ್ನಡ ಸಹ ಶಿಕ್ಷಕರನ್ನು ಸನ್ಮಾನಿಸಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇದು ಸತತ ನಾಲ್ಕನೇ ವರ್ಷದ ಸಮಾರಂಭವಾಗಿದೆ.




ಓಲೆಮಠದ ಆನಂದ ದೇವರು ಶ್ರೀಗಳು ಸಾನಿಧ್ಯವಹಿಸುವರು. ಹೃದಯರೋಗ ತಜ್ಞ ಡಾ. ಎಚ್. ಜಿ. ದಡ್ಡಿ ಅಧ್ಯಕ್ಷತೆ ವಹಿಸುವರು. ಶಾಸಕ ಜಗದೀಶ ಗುಡಗುಂಟಿ ಸಮಾರಂಭವನ್ನು ಉದ್ಘಾಟಿಸುವರು. ಕೆಎಎಸ್ ಅಧಿಕಾರಿ ಬೆಳಗಾವಿಯ ಕಾಡಾ, ಘಟಪ್ರಭಾಮತ್ತುಮಲಪ್ರಭಾಯೋಜನೆಗಳ ಉಪ ಆಡಳಿತಾಧಿಕಾರಿ ಪ್ರಶಾಂತ ಹನಗಂಡಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಯಲ್ಲಟ್ಟಿಯ ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕ,ಕೆಇಎಸ್ ಅಧಿಕಾರಿ ಶಿವಾನಂದ ಮರೆಗುದ್ದಿ, ಮಧುರಖಂಡಿಯ ಸರ್ಕಾರಿ ಪ್ರೌಢ ಶಾಲೆಯ ಸಹಶಿಕ್ಷಕ ದುಂಡಯ್ಯ ಹಿರೇಮಠ ಅತಿಥಿಗಳಾಗಿ, ಬಸವಜ್ಯೋತಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಟಿ. ಪಿ. ಗಿರಡ್ಡಿ ಹಾಗೂ ಸುಭಾಸ ಆಫ್ಸೆಟ್ಟ್ನ ಮಾಲೀಕ ಅಮಿತ ಭೋಸಲೆ ವಿಶೇಷ ಆಮಂತ್ರಿತರಾಗಿ ಭಾಗವಹಿಸುವರು ಎಂದು ಮಾಹಿತಿ ನೀಡಿದರು.

ಪ್ರಶಸ್ತಿಗೆ ಭಾಜನರಾದವರಲ್ಲಿ ಕೆಲವರು ಉಪನ್ಯಾಸಕರು ಹಾಗೂ ಸಹ ಶಿಕ್ಷಕರು ಸತತ ಮೂರನೇ ಬಾರಿಗೆ ಪ್ರಶಸ್ತಿಗೆ ಭಾಜನರಾಗಿ ಹ್ಯಾಟ್ರಿಕ್ ಸಾಧನೆ ಮಾಡಿದವರು ಹಾಗೂ ಇನ್ನೂ ಕೆಲವರು ನಾಲ್ಕನೇ ಬಾರಿಗೆ ಪ್ರಶಸ್ತಿಗೆ ಆಯ್ಕೆಯಾದವರು ಸೇರಿದ್ದಾರೆ.

ಒಂದೇ ವೇದಿಕೆಯಲ್ಲಿ ಪ್ರಶಸ್ತಿ ಸ್ವೀಕ-ರಿಸುತ್ತಿರುವವರಲ್ಲಿ ಕೆಲವರು ಗುರು-ಶಿಷ್ಯರು ಇರುವುದು ಸಮಾರಂಭದ ವಿಶೇಷತೆಯಾಗಿದೆ ಎಂದು ಪ್ರಾಚಾರ್ಯ ಡಾ. ಟಿ. ಪಿ. ಗಿರಡ್ಡಿ ತಿಳಿಸಿದ್ದಾರೆ.

ಸಾಹಿತ್ಯ ಸೌರಭ ವೇದಿಕೆಯ ಸಂಚಾಲಕ ಪ್ರೊ.ರಾಜಶೇಖರ ಹೊಸಟ್ಟಿ ಹಾಗೂ ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಸಂತೋಷ ತಳಕೇರಿ ಹಾಜರಿದ್ದರು.

# ಬಿಜೆಪಿ ತನ್ನ ರಾಜಕೀಯ ಉದ್ದೇಶಕ್ಕಾಗಿ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ: ಕಾಂಗ್ರೆಸ್ ಯುವ ಮುಖಂಡ ಸೂರ್ಯಪ್ರಕಾಶ್

**ಕೂಡ್ಲಿಗಿ :** ಬಿಜೆಪಿಯು ರಾಜಕೀಯ ಉದ್ದೇಶಕ್ಕಾಗಿ ಇಡಿ ಸೇರಿ ಹಲವು ತನಿಖಾ ಸಂಸ್ಥೆಗಳನ್ನು ದುರುಪಯೋಗ ಪಡಿಸಿಕೊಳ್ಳುವ ಕೆಟ್ಟ ಚಾಳಿಯನ್ನು ಅನುಸರಿಸುತ್ತಿದೆ ಎಂದು ಕಾಂಗ್ರೆಸ್ ಯುವ ಮುಖಂಡ ಸೂರ್ಯಪ್ರಕಾಶ್ ಆರೋಪಿಸಿದ್ದಾರೆ.



ತಾಲೂಕಿನ ಕಾನ ಹೊಸಹಳ್ಳಿ ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಯುವ ಮುಖಂಡ ಸೂರ್ಯ ಪ್ರಕಾಶ್ ಮಾತನಾಡಿ ನಮ್ಮ ಬಳ್ಳಾರಿ ಲೋಕಸಭಾ ಸಂಸದರು ತುಕಾರಾಂ ಸಂಡೂರು, ಬಳ್ಳಾರಿ ನಗರ ಶಾಸಕರು ಭರತ್ ರೆಡ್ಡಿ, ಕೂಡ್ಲಿಗಿ ಶಾಸಕರಾದ ಡಾ. ಶ್ರೀನಿವಾಸ ಹಾಗೂ ಕಂಪ್ಲಿ ಶಾಸಕರು ಗಣೇಶ ಸೇರಿದಂತೆ ನಮ್ಮ ಎಲ್ಲ ಕಾಂಗ್ರೆಸ್ ಶಾಸಕರು, ಮಾಜಿ ಸಚಿವರು ಆರೋಪ ಮುಕ್ತರಾಗುತ್ತಾರೆಂಬ ವಿಶ್ವಾಸ ನಮಗಿದೆ. ನಮ್ಮ ಕಾಂಗ್ರೆಸ್ ಶಾಸಕರು ಹಗಲಿರಳು ಜನರ ಸಮಸ್ಯೆಗೆ ಸ್ಪಂದಿಸಿ ಜನರ ಪರವಾಗಿ ಕೆಲಸ ಮಾಡುತ್ತಾರೆ. ಇದನ್ನು ಬಿಜೆಪಿಯವರು ಸಹಿಸಿಕೊಳ್ಳಲಾರದೆ ಈ ರೀತಿ ದಾಳಿ ನಡೆಸುತ್ತಿದೆರೆ. ದೇಶದಲ್ಲಿ ಈವರೆಗೆ ನಡೆದ ಎಲ್ಲ ದಾಳಿಗಳು ಕಾಂಗ್ರೆಸ್ ಹಾಗೂ ಇತರ ಪಕ್ಷದ ವರ ಮೇಲೆಯೇ ಆಗಿದೆ. ಈವರೆಗೆ ಒಬ್ಬೇ ಒಬ್ಬ ಬಿಜೆಪಿಯ ನಾಯಕನ ಮೇಲೆ ಈಡಿ ದಾಳಿ ಆಗಿಲ್ಲ. ಭ್ರಷ್ಟಾಚಾರ ಮಾಡಿರುವವರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ಕ್ಲೀನ್ ಚಿಟ್ ಕೊಡುತ್ತಾರೆ. ಇವರ ಕಣ್ಣಿಗೆ ಕಾಣುವುದು ಮಾತ್ರ ಕಾಂಗ್ರೆಸ್ ಪ್ರಭಾವಿ ನಾಯಕರು. ಬಿಜೆಪಿಯನ್ನು ಪ್ರಜ್ಞಾವಂತರು ವಾಶಿಂಗ್ ಮಶೀನ್ ಎಂದು ವ್ಯಂಗ್ಯ ಆಡುವ ಮಟ್ಟಕ್ಕೆ ಇವರ ಸರ್ವಾಧಿಕಾರ ನಡೆಯುತ್ತಿದೆ.

ಇನ್ನು ಸಾವಿರಾರು ಕೋಟಿ ರೂಪಾಯಿಗಳ ಅವ್ಯವಹಾರ ಮಾಡಿ ಜೈಲಿಗೆ ಹೋದವರಿಗೆ ಶಿಕ್ಷೆ ಆದೇಶಕ್ಕೆ ತಡೆಯಾಜ್ಞೆ, ಜಾಮೀನು ಸಿಗುತ್ತದೆ. ಇಂತಹ ಸನ್ನಿವೇಶದಲ್ಲಿ ಯಾವುದೋ ಒಂದು ತುಂಡು ಹಾಳೆಯನ್ನಿಟ್ಟುಕೊಂಡು ಬಿಜೆಪಿ ನಮ್ಮ ನಾಯಕರನ್ನು ಬೆದರಿಸುತ್ತಿದೆ. ನಮ್ಮ ಕಾಂಗ್ರೆಸ್ ಪಕ್ಷದ ಸಂಸದರಾಗಲಿ ಶಾಸಕರಾಗಲಿ ಕಾರ್ಯಕರ್ತರಾಗಲಿ ಬಿಜೆಪಿಯವರ ಗೊಡ್ಡು ಬೆದರಿಕೆಗೆ ಹೆದರುವ ಪ್ರಶ್ನೆಯೇ ಇಲ್ಲ. ಬಿಜೆಪಿಯು ರಾಜಕೀಯ ಉದ್ದೇಶಕ್ಕಾಗಿ ಇಡಿ ಇತರೆ ತನಿಖಾಸಂಸ್ಥೆಗಳನ್ನುದುರುಪಯೋಗಪಡಿಸಿಕೊಳ್ಳುವ ಕೆಟ್ಟ ಚಾಳಿಯನ್ನು ಅನುಸರಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಯುವ ಮುಖಂಡ ಸೂರ್ಯಪ್ರಕಾಶ್ ತೀವ್ರವಾಗಿ ಖಂಡಿಸಿ ಆರೋಪಿಸಿದ್ದಾರೆ.

# ಸಮಾಜದ ಅಭಿವೃದ್ಧಿಗಾಗಿ ಹಿರಿಯರ ಮಾರ್ಗದರ್ಶನ ಅಗತ್ಯ ಯುವಕರು ಕ್ರಿಯಾಶೀಲರಾಗಿ ಸಮಾಜದ ಅಭಿವೃದ್ಧಿಗೆ ಶ್ರಮಿಸಿ

**ಬನಹಟ್ಟಿ :** ಮಾಹೇಶ್ವರಿ ಸಮಾಜದ ಅಭಿವೃದ್ಧಿಗಾಗಿ ಮುಂದಿನ ದಿನಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಸಮಾಜದ ಅಭಿವೃದ್ಧಿಗಾಗಿ ಹಿರಿಯರ ಮಾರ್ಗದರ್ಶನ ಅಗತ್ಯವಾಗಿದೆ. ಯುವಕರು ಕ್ರಿಯಾಶೀಲರಾಗಿ ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು. ನಮ್ಮ ಸಮಾಜವು ಸಮಾಜ ಕಲ್ಯಾಣದ ಜೊತೆಗೆ ವಿಶೇಷ ಸಂಸ್ಕೃತಿಯನ್ನು ಹೊಂದಿದೆ ಎಂದು ಸ್ಥಳೀಯ ಮಾಹೇಶ್ವರಿ ಸಮಾಜದ ಅಧ್ಯಕ್ಷ ಪವನ ಲಡ್ಡಾ ತಿಳಿಸಿದರು. ಶನಿವಾರ ಇಲ್ಲಿನ ಬಾಲಾಜಿ ಮಂದಿರದಲ್ಲಿ 5158 ನೇ ಮಾಹೇಶ್ವರಿ ವಂಶೋತ್ಪತ್ತಿ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡ ಸಮಾರಂಭದಲ್ಲಿ ಅವರು ಮಾತನಾಡಿದರು.



ಸಮಾಜದ ಧುರೀಣ ಓಂಪ್ರಕಾಶ ಕಾಬ್ರಾಮಾತನಾಡಿ,ರಾಜ್ಯದಲ್ಲಿಯ ಮಾಹೇಶ್ವರಿಸಮಾಜಬಾಂಧವರು ಸಂಘಟಕರಾಗುವುದರ ಜೊತೆಗೆ ಆರ್ಥಿಕವಾಗಿ ಹಿಂದುಳಿದ ಮಾಹೇಶ್ವರಿ ಸಮಾಜದ ಮಕ್ಕಳು ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಸಹಾಯ ಸಹಕಾರ ನೀಡಬೇಕು ಎಂದು ತಿಳಿಸಿದರು.

ಮಾಹೇಶ್ವರಿ ವಂಶೋತ್ಪತ್ತಿ ದಿನಾಚರಣೆಯ ಅಂಗವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ನಂತರ ಬಾಲಾಜಿ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ನಡೆಯಿತು.

ಈ ಸಂದರ್ಭದಲ್ಲಿ ಶ್ಯಾ ಮ್ ಭೂತಡಾ, ಗೋವಿಂದ ಕಾಬ್ರಾ, ಹರಿಪ್ರಕಾಶ ಕಾಬ್ರಾ, ಗೋಪಾಲ ಭಟ್ಟಡ,

ಗೋವಿಂದ ಡಾಗಾ, ಮುರಳಿ ಕಾಬ್ರಾ, ನಾರಾಯಣ ಮಾಲಪಾಣಿ, ಪಂಕಜ ತೊತ್ಲಾ, ಗೋವಿಂಡ ಲಡ್ಡಾ, ಶ್ರೀರಂಗ ಮಾಲಪಾಣಿ, ಶ್ರೀನಾಥ ರಾಠಿ, ವಿಷ್ಣು ಭಟ್ಟಡ, ಸಂಜಯ ಡಾಗಾ, ಅರ್ಚನಾ ಸಾರಡಾ, ಸುಶಿಲಾ ಕಾಬ್ರಾ, ಉಮಾ ಭಟ್ಟಡ, ನೀತಾ ರಾಠಿ, ಚಂದ್ರಕಲಾ ಕಾಬ್ರಾ, ಜ್ಯೋತಿ ಭಟ್ಟಡ, ಸಂತೋಷಿ ಲಡ್ಡಾ ಸೇ-ರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ಕಾರಹುಣ್ಣಿಮೆ ಸಂಭ್ರಮ: ದೇವರ್ಲಳ್ಳಿ ತಿಮ್ಮಣ್ಣನ ಎತ್ತು ಪ್ರಥಮ



**ಕೂಡ್ಲಿಗಿ:** ಕೂಡ್ಲಿಗಿತಾಲೂಕಿನಗುಡೇಕೋಟೆಸೇರಿದಂತೆ ಹೋಬಳಿ ವ್ಯಾಪ್ತಿಯ ಬುಧವಾರ ವಿವಿಧ ಗ್ರಾಮಗಳಲ್ಲಿ ರೈತರ ಪಾಲಿನ ಮೊದಲ ಹಬ್ಬ ಕಾರ ಹುಣ್ಣಿಮೆಯನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಗುಡೇಕೋಟೆ ಗ್ರಾಮದ ಹಾನಗಲ್ ರಸ್ತೆಯಲ್ಲಿ ಬುಧವಾರ ಸಂಜೆ ಏರ್ಪಡಿಸಲಾಗಿದ್ದ ಎತ್ತಿನ ಓಟದ ಸ್ಪರ್ಧೆಯನ್ನು ಜನರು ಓಟ ನಡೆಯುತ್ತಿದ್ದ ರಸ್ತೆಯುದ್ದಕ್ಕೂ ಎರಡು ಬದಿಯಲ್ಲಿ ನಿಂತು ಎತ್ತಿನ ಓಟವನ್ನು ಕುತೂಹಲದಿಂದ ವಿಕ್ಷಿಸಿದರು.ಈ ಎತ್ತುಗಳ ಓಟವನ್ನು ಜನರು ಮನೆ ಅಂಗಡಿಗಳು ಮುಂದೆ,ಮಾಳಿಗೆಗಳ ಮೇಲೆಯೂ ಅಪಾರ ಸಂಖ್ಯೆಯಲ್ಲಿ ನಿಂತು ನೋಡುತ್ತಿದ್ದರು.ಹೀಗಾಗಿ ಸ್ಪರ್ಧೆ ನಡೆದ ರಸ್ತೆ ಬದಿಯಲ್ಲಿ ಜನ ಜಾತ್ರೆಯಂತೆ ಕಂಡು ಬಂತು. ಈ ಒಂದು ಸ್ಪರ್ಧೆಯಲ್ಲಿ ಗ್ರಾಮದ ರೈತರಾದ ದೇವರ್ಲಳ್ಳಿ ತಿಮ್ಮಣ್ಣನವರ ಎತ್ತು ಪ್ರಥಮ ಸ್ಥಾನ ಪಡೆಯಿತು. ಈ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಗುಡೇಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಎನ್.ಕೃಷ್ಣ ಅವರು ಮಾತನಾಡಿ, ನಮ್ಮೂರಿನಲ್ಲಿ ಕಾರ ಹುಣ್ಣಿಮೆ ಮೊದಲ ಬಾರಿಗೆ ಆಚರಿಸುವ ಕೃಷಿಕರಿಗೆ ವಿಶಿಷ್ಟವಾಗಿ ಆಚರಿಸುವ ಹಬ್ಬವಾಗಿದೆ.ಗ್ರಾಮದಲ್ಲಿ ಎಲ್ಲರೂ ಸೇರಿ ಒಗ್ಗಟ್ಟಿನಿಂದ ಹಬ್ಬವನ್ನು ಆಚರಿಸುತ್ತಿದ್ದು, ಸೌಹಾರ್ದ ಸಂದೇಶ ಸಾರುವಂತಿದೆ.ಕೃಷಿಕರ ಸಾಂಪ್ರದಾಯಿಕ ಆಚರಣೆಗಳನ್ನುಪಾಲಿಸುವಮೂಲಕನಮ್ಮಗ್ರಾಮೀಣ ಸೊಗಡಿನ ಸಂಸ್ಕೃತಿ ಪರಂಪರೆ ಉಳಿಸಿಕೊಂಡು ಬರಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ಗುಡೇಕೋಟೆ ಗ್ರಾಮದ ಪ್ರಮುಖ ಎಲ್ಲಾ ಮುಖಂಡರು, ಯುವಕರು, ರೈತರು, ಉಪಸ್ಥಿತರಿದ್ದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State